ಅಪರಂಜಿ

ಜೂನ್
1993
ತಿಳಿನಗೆಯ ಕಾರಂಜ



* ಪ್ರಕಾಶ್
* ವಿಕಟಕವಿ
* ಕಂ. ಭಂ. ಕೃಷ್ಣಮೂರ್ತಿ
* ಪ್ರಭಾ
* ವಾಸುದೇವ ಮೂರ್ತಿ
* ಶಿವು
* ವಿಜಯ ಸಚ್ಚಿದಾನಂದ
* ಶಾಂತ ರಘು
* ನಂದಿನಿ ಕಾಪಡಿ
* ಸಿ. ಆರ್. ಸತ್ಯ
* ಮೈ. ನಾ. ಜಯಕೇಸರಿ

ಬಿಡಿ ಪ್ರತಿ : 2 ರೂ. 50 ಪೈ.



ಸಂಪುಟ ೧೦ ಜೂನ್ ೧೯೯೩ ಸಂಚಿಕೆ ೯

ಗೋವಿಂದೇ ಗೌಡ್ರ ಜೋಕು

ಒಮ್ಮೆ ಕಿರಿಸ್ತಾನ ದಂಪತಿಗಳ್ಗೆ ಅವಳಿ ಜವಳಿ ಉಟ್ಕೊದ್ದ. ಅವಕೆ "ಟ್ವಿನ್ ಅಂಡ್ ಮಾರ್ಕ್ ಟ್ವಿನ್" ಅಂತ ಹೆಸರಿಟ್ರು. ಸ್ಸರಿ, ಎರಡನೇ ದಪನೂವೆ ಅವಳೀನೆ ಉಟ್ಕೊಂದೇ. ಅಪ್ಪ ತಲೆ ಕೆರ್ಕೊಂಡ. ತಕ್ಕ, ಒಳೀತು. ಇಟ್ಟೇ ಬುಟ್ಟ "ಪೀಟರ್ ಅಂಡ್ ರಿಪೀಟರ್" ಅಂತಾವ. ಮೂರ್ನೇ ಬಾರಿ ಅವಳಿ ಉಟ್ದಾಗ ಸುಸ್ತೊ ಸುಸ್ತು. ಆದ್ರೂ ನೂವೆ ಎಸರು ಇಡ್ದೆ ಇರೋಕ್ಕಾಯ್ತದ. ಇಟ್ರು ಏನಂತಾವ." "ಮ್ಯಾಕ್ಸ್ ಅಂಡ್ ಕ್ಲೈಮ್ಯಾಕ್ಸ್". ಇಲ್ಲಿಗೇ ಮುಗೀತು ಕತೆ ಅಂತ ತಿಳ್ಕಬ್ಯಾಡ್ರಿ, ನಾಲ್ಕನೇ ದಪ ಯೆಂಡ್ತಿ ಬಸುರಿ ಆದ್ಲು, ಪ್ರಸವ ಆತು. ಕರ್ಮಕ್ಕ್. ನಿಮ್ಗೊತ್ತಾಯ್ತೆ ಅಂಗೇ ಉಟ್ಕುದ್ವು ಅವಳಿ ಜವಳಿ. ಇನ್ಮುಂದರಿಸೋದು ಸರಿ ಅಲ್ಲ ಅಂತ ನಿಶ್ಚಿಸಿ ಇಟ್ಟೇ ಬುಟ್ರು ತಂದೆ ತಾಯ್ದೀರು "ಟಯರ್ಡ್ ಅಂಡ್ ರಿಟಯರ್ಡ್".

ಹೇಳಿದ್ದು : ಗೋವಿಂದೇ ಗೌಡ್ರು

ಬರ್ಕೊಂಡಿದ್ದು : ಭ. ನಾಗರಾಜ್
ಗುಂಡ್ಲುಪೇಟೆ

ಗೌರವ ಸಲಹೆಗಾರರು :
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ಸಂಪಾದಕ :
ಶಿವಕುಮಾರ್

ಚಂದಾ ವಿವರ :
ಬಿಡಿ ಪ್ರತಿ
2 ರೂ. 50 ಪೈ.
ವಾರ್ಷಿಕ ಚಂದಾ
25 ರೂ.

ಆಜೀವ ಚಂದಾ
250 ರೂ.

ವಿಳಾಸ
ಅಪರಂಜಿ ಕಾರ್ಯಾಲಯ
36, 6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560 003

ಕೆಲಸದ ವೇಳೆ :
ಬೆಳಗ್ಗೆ 8ರಿಂದ
10 ಗಂಟೆಯವರೆಗೆ

ಈ ಸಂಚಿಕೆಯಲ್ಲಿ

ಲೇಖನ	ಲೇಖಕ/ಲೇಖಕಿ	ಪುಟ
ಅಪರಂಜಿ ಕಿಡಿ	ಪ್ರಕಾಶ್	4
ವಾರ್ತಾ–ನಾರಿ	ವಿಕಟಕವಿ	6
ಶ್ರೀಸಾಮಾನ್ಯನ ಸವಾಲು	ಕಂ. ಭಂ. ಕೃಷ್ಣಮೂರ್ತಿ	7
ಹಾಯಿಕು ಮೀಮಾಂಸೆ	ಪ್ರಭಾ	11
ಪ್ರಣಾಳಿಕೆ	ಎನ್.ಆರ್. ವಾಸುದೇವ ಮೂರ್ತಿ	12
ಯಾವ ಹುತ್ತದಲ್ಲಿ	ಶಿವು	13
ಆತ, ಆಕೆ ಮತ್ತು ನಾನು	ವಿಜಯ ಸಚ್ಚಿದಾನಂದ	17
ಹಾಸ್ಯ ಲೇಖನ	ಪ್ರಕಾಶ್	20
ಸೊಟ್ಟವೂ ಸೊಗಸು	ಶಾಂತ ರಘು	22
ಕೂಗು–ಮಾರಿ	ನಂದಿನಿ ಕಾಪಡಿ	26
ದಿವ್ಯ (ದೂರ) ವಾಣಿ	ಸೀ. ಆರ್. ಸತ್ಯ	29
ನಾಕನೆಯುವನು	ಮೈ. ನಾ. ಜಯಕೇಸರಿ	32

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು
ದೂರವಾಣಿ 342144

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೧೦ ಜೂನ್ ೧೯೯೩ ಸಂಚಿಕೆ ೯

ಮೊದಲು ಇದು ಅಸತ್ ಆಗಿತ್ತು

—ತೈತ್ತಿರೀಯ

ಶೂನ್ಯದಿಂದ ಸೃಷ್ಟಿಯಾಯಿತೆಂದು ಉಪನಿಷತ್ತೇ ಹೇಳಿದೆಯಲ್ಲಾ ಎನ್ನುವ ವಕ್ಕೆ ವೇದಾಂತ ವಿರೋಧಿಗಳು ಉದಾಹರಿಸುವ ವಾಕ್ಯವಿದು.

ಬ್ರಹ್ಮವಿಲ್ಲವೆಂದು ತಿಳಿದವನು ಇಲ್ಲವಾಗುತ್ತಾನೆ. ಇದೆ ಎಂದರಿತವನನ್ನು ಇದ್ದಾನೆಂದು ಅರಿಯುತ್ತಾರೆ ಎಂದು ಹೇಳಿದ ನಂತರ ಬರುವ ವಾಕ್ಯವಿದು. ಜಗತ್ತು ಹೆಸರು ಆಕಾರಗಳಿಂದ ಬಿಡಿಬಿಡಿಯಾಗಿ ಗುರುತಿಸಲ್ಪಡುತ್ತದೆ. ಸೃಷ್ಟಿಗೆ ಪೂರ್ವದಲ್ಲಿ ಇದಾವುದೂ ಇರಲಿಲ್ಲ. ಈಗ ನಮ್ಮ ಪಾಲಿಗೆ ಬ್ರಹ್ಮವಿಲ್ಲವೇನೋ ಎನ್ನಿಸುತ್ತದೆ.

ಮೊದಲು ಈ ರಂಪವಿರಲಿಲ್ಲ. ಆಡಳಿತ ನಮ್ಮ ಕೈಗೆ ಬಂದ ಮೇಲೇ, ನಮ್ಮಲ್ಲಿ ಇಷ್ಟು ಒಡಕು, ಅನುಮಾನ, ಭಯ, ಕ್ರೌರ್ಯ ಛಿದ್ರಗಳಿವೆ ಎಂದು ತಿಳಿಯಲಾರಂಭಿಸಿತು. ಮೊದಲು ಐಕ್ಯವೇ ಇದ್ದಂತೆ ತೋರುತ್ತಿತ್ತು. ಈಗಲೂ ಇರುವುದು ಐಕ್ಯವೇ.

ಆದರೆ ಈ ಛಿದ್ರೀಕರಣದ ವಿಷವೃತ್ತವನ್ನು ಆರಂಭಿಸುವುದೂ ಅದೇ. ಮತ್ತೆ ಮುಂದೂ ಇರುವುದು ಐಕ್ಯವೇ !

ಈ ಒಡಕನ್ನು ಕಾಣುವ ಪ್ರವೃತ್ತಿ ಹಿಂಗಿ ಹೋದರೆ ಆಯಿತು. ಈ ಪ್ರವೃತ್ತಿ ಹೋಗಲು ಒಂದು ಔಷಧಿಯಿದೆ. ಮೊಲದ ಕೊಂಬಿನ ಕಷಾಯವನ್ನು ನುರಿತ ವೈದ್ಯರ ಆದೇಶದಂತೆ ಸೇವಿಸಿದರೆ ಆಯಿತು. ೦



—ಪ್ರಕಾಶ್

ಸಚಿವರಿಗೆ ನೀತಿ ಸಂಹಿತೆ ಕಡ್ಡಾಯ

——ಮುಖ್ಯ ಮಂತ್ರಿಗಳು

ಅಂದರೆ, ಇದುವರೆಗೂ .. ? !

* * *

ರಾಜ್ಯದಲ್ಲಿ 11.2 ಲಕ್ಷ ಕೋರ್ಟ್ ಪ್ರಕರಣಗಳು ಬಾಕಿ

—ಸುದ್ದಿ

ಅನ್ಯಾಯ ! !

* * *

ಕೋಳಿ ಸಹಿತ ಮೂವರು ಕೈದಿಗಳು ಪಲಾಯನ

—ಸುದ್ದಿ

ಆ ಕೋಳಿಗಳನ್ನಾದರೂ ವಾಪಸು ಪಡೆಯಲೇ ಬೇಕು !

* * *

ವಾಲ್ಟ್ ಡಿಸ್ನಿ ಎಫ್.ಬಿ.ಐ. ಗೆ ಗೂಢಚಾರನಾಗಿ ಕೆಲಸ ಮಾಡುತ್ತಿದ್ದ

——ಪತ್ರಿಕೆ

ಎಷ್ಟು ಮಿಕಿ ಮೌಸ್‌ಗಳನ್ನು ಆತ ಹಿಡಿದಿದ್ದನೋ ?

* * *

ನೀವು ಮನೆಯಲ್ಲೇ ರುಚಿಕರ ಇಡ್ಲಿ ಮಾಡಬಲ್ಲಿರಿ

—ಇಡ್ಲಿ ಸ್ಟ್ಯಾಂಡ್ ಜಾಹೀರಾತು

ನವ ವಿವಾಹಿತ ಗಂಡ ಬೇಗ ಜಾಹೀರಾತನ್ನ ಮುಚ್ಚಿಟ್ಟನಂತೆ ! !

*   *   *

ವೈದ್ಯ ಶಿಕ್ಷಣ ಶುಲ್ಕ 55 ಸಾವಿರ ರೂಪಾಯಿ

—ಪತ್ರಿಕೆ

ಭಾವೀ ರೋಗಿಗಳು ನಡುಗಿದರಂತೆ !

*   *   *

ಸರ್ಕಾರೀ ಕೆಲಸಗಾರರಿಗೆ ನಿಷ್ಠೆ ಮುಖ್ಯ

—ಶ್ರೀ ಬಂಗಾರಪ್ಪ

ಆಹಾ !

*   *   *

1991-92ರಲ್ಲಿ ಸಿಗರೇಟುಗಳಿಂದ 2387 ಕೋಟಿ ರುಪಾಯಿ ಅಬಕಾರಿ ಆದಾಯ

—ಕೇಂದ್ರ ಸಚಿವರು

ಕಾಯಿಲೆಗಳಿಂದ ಎಷ್ಟು ಜನ ನರಳುತ್ತಾರೆ ಎಂಬ ಅಂಕಿ ಅಂಶ ಅವರಿಗೆ ಗೊತ್ತಿರಲಾರದು !

*   *   *

ಎವರೆಸ್ಟ್ ಹತ್ತಲು ಹತ್ತುಸಾವಿರ ಡಾಲರ್ ಶುಲ್ಕ

—ಸುದ್ದಿ, ನೇಪಾಳದಿಂದ

ಪರ್ವತ ಏರುವುದಕ್ಕಿಂತ ಶುಲ್ಕ ದುಸ್ಸಾಧ್ಯ ! !

*   *   *

ಸಂಜಯ್ ದತ್ ಬಂಧನ

—ಸುದ್ದಿ

'ಮದರ್ ಇಂಡಿಯಾ' ಕಣ್ಣೀರು ಸುರಿಸಿದಳಂತೆ !

*   *   *

ವಾರ್ತಾ-ನಾರಿ

—ವಿಕಟಕವಿ

ನ್ಯೂಸನು ಓದುವಳಾರೀ ನಾರೀ
ಮುಖಾರವಿಂದದಿ ರೌದ್ರವ ತೋರಿ ?

ಕಣ್ಣುಗಳಿಂದಂ ನಗೆಯನು ಬೀರಿ
ಇಕ್ಕೆಲಗಳಿಗೂ ಜಡೆಯನು ತೋರಿ
ಕೆನ್ನಾಲಗೆಯಿಂ ಪದಗಳು ಸೋರಿ
ಪದಮುಚ್ಚಾರಗಳೆಲ್ಲೆಯ ಮೀರಿ !

ಕಂಠದೊಳಂಜಿಪ ಲೇಟೆಸ್ಟ್ ಮಾಲೆ
ಕರದಲಿ ರಂಜಿಪ ಕ್ರಿಸ್ಪ್ ನ್ಯೂಸ್ ಹಾಳೆ
ಏನಿದು ರಾಣಿಯ ಭಾಷೆಯ ಲೀಲೆ ?
ಎಚ್ಚರಿಸುತಿದೆ ಗಡಿಯಾರವು ಮೇಲೆ !

ಭಾರತವರ್ಷದ ಕೋಟ್ಯನು ಕೋಟಿ
ಆಂಟೆನಗಳನೆಲ್ಲವ ಮೀಟಿ,
ದರ್ಶಕ ವೃಂದಕೆ ನೀಡುತ ಭೇಟಿ

ವಾರ್ತಾ ನಾರಿಗೆ ಇಲ್ಲವು ಸಾಟಿ !

(ಕುವೆಂಪು ಅವರು ಓದದಿರಲಿ !)

7

ಶ್ರೀಸಾಮಾನ್ಯನ ಸವಾಲು

ಕಂ. ಭಂ. ಕೃಷ್ಣಮೂರ್ತಿ

ಕನಿಷ್ಟಬಿಲ್ಲೆ ಶಿವಪ್ಪ ಮಲ್ಲೇಶ್ವರದ ಕ್ರಾಸಿನ ಮೂಲೆಯಲ್ಲಿದ್ದ ಮರದ ಮರೆಯಲ್ಲಿ ಕುಳಿತುಕೊಂಡು ಬೀಡಿ ಸೇದುತ್ತಿದ್ದ. ಆಗಾಗ ತನ್ನ ಕಾಕ ದೃಷ್ಟಿಯನ್ನು ರಸ್ತೆಯ ಒಂದು ಭಾಗದಲ್ಲಿ ಪಾರ್ಕ್ ಮಾಡಿದ್ದ ವಾಹನಗಳ ಮೇಲೆ ಬೀರುತ್ತಿದ್ದ. ಎಸ್.ಐ. ಸಾಹೇಬರು ಅಪ್ಪಣೆ ಕೊಡಿಸಿದ್ದ ಮಾತೊಂದೇ ಅವನ ತಲೆಯಲ್ಲಿ ಹುಳುವಿನಂತೆ ಕೊರೆಯುತ್ತಿತ್ತು.

"ಲೋ ಒನ್ನಾಟು, ಈಗೀಗ ವೆಹಿಕಲ್ ಥೆಫ್ಟ್ ಗೋಳು ಊರ್ನಾಗೆ ಎಚ್ಚಾಗ್ಬುಟ್ಟಿದೆ. ನಿನ್ನ ಬೀಟ್ನಾಗೆ ವಸಿ ಸೆಂದಾಗಿ ನಿಗಾ ಮಡಗು" ಎಂದು ಎಸ್.ಐ. ಲಿಂಗಪ್ಪನೋರು ಹಲವಾರು ಬಾರಿ ಅವನಿಗೆ ತಾಖೀತು ಮಾಡಿದ್ದರು. ಆದರೆ ಶಿವಪ್ಪ ತಾನೇ ಏನು ಮಾಡಿಯಾನು? ಕಾರಿನ ಕಳ್ಳರು ತಾವೇ ಖುದ್ದು ರಾಜಿಯಿಂದ ಬಂದು ಸಿಕ್ಕಿಹಾಕಿಕೊಳ್ಳಲು ಅವರೇನು ಮೂಢಮತಿಗಳೇ. ಮೂರು ದಿನದಿಂದ ಕಣ್ಣಿಗೆ ಎಣ್ಣೆಬಿಟ್ಟುಕೊಂಡು ನಿಗಾ ಮಡಗಿದರೂ ಒಬ್ಬ ಸಂಶಯಾಸ್ಪದ ವ್ಯಕ್ತಿಯೂ ಅವನ ಕಣ್ಣಿಗೆ ಬಿದ್ದಿರಲಿಲ್ಲ. ಕಾರಿರಲಿ ಕಡ ಪಕ್ಷ ಒಂದು ಸೈಕಲ್ಲನಾದ್ರೂ ತನ್ನ ಮುಂದೆ ಕದ್ದಿದ್ದರೆ, ಇಸಮ್ಮನ್ನು ಹಿಡಿದು, ಒದ್ದು ಒಳಗೆ ಹಾಕಬಹುದಾಗಿತ್ತು. ಆದರೆ ಅದೂ ಸಾಧ್ಯವಾಗಿರಲಿಲ್ಲ.

"ಮಫ್ತೀಲಿ ಓಗಿ ವಾಚ್ ಮಾಡೋ ಮಂಕನನ್ನ ಮಗ್ನೆ" ಎಂದು ಎಸ್.ಐ. ಇವನಿಗೆ ಆದೇಶಿಸಿದ್ದರು. ಡ್ರೆಸ್ ಮೇಲಿದ್ದೇ ತನ್ನನ್ನು ಪೋಲೀಸಿನವನೆಂದು ತಿಳಿದುಕೊಳ್ಳಲು, ಅನುಮಾನಿಸುತ್ತಿದ್ದ ಮಂದಿ. ಇನ್ನು ಬೇದಿರಿಸಿನಲ್ಲಿ ಹೋದರೆ ಪೋಲೀಸಿನವನೆಂದು ಗುರುತಿಸಲು ಸಾಧ್ಯವೇ ? ತನ್ನನ್ನೇ ಕೇಡಿಯೆಂದು ತಿಳಿದು ನಾಲ್ಕು ಮಂದಿ ಚದುಕಿದರೆ ತನ್ನ ಗತಿ ಏನು ? ಮಡದಿ ಮಕ್ಕಳೊಂದಿಗ ಬೇರೆ.

ಪುಂಖಾನು ಪುಂಖವಾಗಿ ಯೋಚನೆಗಳ ಸರಮಾಲೆಗಳು ತಲೆಯನ್ನು ತಿನ್ನುತ್ತಿದ್ದಾಗ ಶಿವಪ್ಪ ತಲೆಯ ಮೇಲೆ ಕೈಹೊತ್ತು ತೆಪ್ಪಗೆ ಕುಳಿತಿದ್ದ. ಆಗ ಅವನ ದೃಷ್ಟಿ ಅಕಸ್ಮತ್ತಾಗಿ, ಎದುರುಗಡೆಯ ರಸ್ತೆಯ ಮೇಲೆ ಓಡಾಡುತ್ತಿದ್ದ ವ್ಯಕ್ತಿಯೊಂದರ ಮೇಲೆ ಬಿದ್ದಿತು. ಆ ವ್ಯಕ್ತಿಯನ್ನೇ ಗಮನವಿಟ್ಟು ನೋಡಿದ ಶಿವಪ್ಪ. ತಲೆಗೊಂದು ರುಮಾಲು, ಮೈಮುಚ್ಚುವಂತಹ ಸರ್ಜ್‌ಕೋಟು, ಮೇಲುಕೋಟೆ ಅಂಚಿನ ಕಚ್ಚೆ

ಪಂಚೆಯಿಂದ ಅಲಂಕೃತನಾಗಿದ್ದ ಆ ವ್ಯಕ್ತಿ, ಫುಟ್‌ಪಾತಿನ ಬದಿಗೆ ನಿಂತು ಕಾಲುಘಂಟೆಯಿಂದ ಏನನ್ನೋ ಹುಡುಕುತ್ತಲೇ ಇತ್ತು. ಸಂಶಯಾಸ್ಪದವಾಗಿ ವರ್ತಿಸುತ್ತಿದ್ದ ಆ ವ್ಯಕ್ತಿಯನ್ನು ತನಿಖೆ ಮಾಡಲೆಂದು, ಶಿವಪ್ಪ ತಾನು ಕುಳಿತಿದ್ದ ಸ್ಥಳದಿಂದ ಮೇಲೆದ್ದು ನಿಂತು, ನಡುವಿನಲ್ಲಿದ್ದ ಬೆಲ್ಟನ್ನೂ ಬಿಗಿ ಮಾಡಿಕೊಂಡ. ಎದೆಯನ್ನು ಮುಂದೆ ಸೆಟೆಸಿ, ಲಾಠಿ ತಿರುಗಿಸುತ್ತಾ ಆ ವ್ಯಕ್ತಿಯ ಹತ್ತಿರಕ್ಕೆ ಬಂದು ನಿಂತುಕೊಂಡ.

"ಏಯ್ ಯಾರ್ರೀ ಅದು. ಏನ್ಮಾಡ್ತೀದ್ರಿ. ಎಂದು ಪೋಲೀಸ್ ಜಬರಿನಿಂದಲೇ ಕೇಳಿದ.

ಆ ವ್ಯಕ್ತಿ ಸುಲೋಚನವನ್ನು ಮೂಗಿನಮೇಲೆಳೆದುಕೊಂಡು, ಶಿವಪ್ಪನನ್ನು ದಿಟ್ಟಿಸಿ ನೋಡಿತು, "ನೀನ್ಯಾರಪ್ಪ" ಎಂದು ಮರು ಪ್ರಶ್ನೆ ಹಾಕಿತು. ಪೋಲೀಸಿನವ ನನ್ನೇ ನೀನ್ಯಾರು" ಎಂದು ಕೇಳೋದೆ. ಎಂಥಹ ಕಾಲ ಬಂತಪ್ಪ ಎಂದು ಶಿವಪ್ಪ ಮರುಗಿದ.

"ಕಣ್ಣು ಕಾಣ್ಸೋಕಿಲ್ವ ?" ಎಂದು ಶಿವಪ್ಪ ಕೈಯಲ್ಲಿ ಲಾಠಿ ತಿರುಗಿಸುತ್ತಾ ಕೇಳಿದ. ಲಾಠಿಯನ್ನು ನೋಡಿಯಾದರೂ ಈ ವ್ಯಕ್ತಿ ತನ್ನನ್ನು ಪೋಲೀಸಿನವನೆಂದು ಗುರುತಿಸ ಬಹುದೆಂಬ ನಂಬಿಕೆ ಅವನಿಗೆ.

"ಕಣ್ಣು ಕಾಣುತ್ತಪ್ಪ, ಆದರೆ ನನಗೆ ಕಲರ್ ಬ್ಲೈಂಡ್, ಬಣ್ಣಗಳು ಸರಿಯಾಗಿ ತಿಳಿಯೋಲ್ಲ," ಎಂದಿತು ಆ ವ್ಯಕ್ತಿ.

"ನಾನು ಆಕಿರೋದು ಕಾಕಿಬಟ್ಟೆ. ತಿಳಿತದಾ"? ಎಂದ ಶಿವಪ್ಪ.

"ಓ ಪೋಲಿಸಿನೋನಾ ನೀನು. ನಿನ್ನ ಬಟ್ಟೆ ಬಣ್ಣ ನೋಡಿ, ಎಲ್ಲೋ ಕಾವಿಬಟ್ಟೆ ಹಾಕಿರೋ ಬಿಡಿ ಸನ್ಯಾಸಿ ಇರ್ಬೇಕೂಂತ ಅನ್ಕೊಂಡೆ. ಹೌದು ನಿನ್ನ ನೋಡಿದ್ರೆ ಹಂಚಿ ಕಡ್ಡಿಯಿದ್ದ ಹಾಗಿದೀಯಾ. ನಿನ್ನನ್ನ ಯಾರಯ್ಯ ಪೋಲೀಸಿಗೆ ಸೇರಿಸಿಕೊಂಡ್ರು ?"

ಹೌದು ಶಿವಪ್ಪನ್ನ ಪೋಲೀಸಿಗೆ ಹೇಗೆ ಸೇರಿಸಿಕೊಂಡ್ರು, ಅವನನ್ನ ತೂಕಕ್ಕೆ ಹಾಕಿ, ತೂಗಿ ಅಳೆದ ವೈದ್ಯರು ಮೆಡಿಕಲ್ಲಾಗಿ ಅನ್‌ಫಿಟ್‌ಮಾಡಿ ಶಿವಪ್ಪನನ್ನು ಹೊರದೂಡಿದ್ದರು. ಯಾರ್ಯಾರಿಗೋ ಏನೇನೋ ಕೊಟ್ಟು, ಭಾರಿ ವಶೀಲಿ ಹಚ್ಚಿ ಶಿವಪ್ಪ ಪೋಲೀಸ್ ಖಾತೆಗೆ ಹೇಗೋ ದಾಖಲಾಗಿದ್ದ, ಆದರೆ ಇದನ್ನೆಲ್ಲಾ ಈ ವ್ಯಕ್ತಿಗೆ ಯಾಕೆ ಹೇಳಬೇಕು ?

ಇದ್ದ ಶಕ್ತಿಯನ್ನೆಲ್ಲಾ ಕಲೆ ಹಾಕಿ, ಗಂಟಲಿಗೆ ತಂದುಕೊಂಡು, ಧ್ವನಿಯೇರಿಸಿಕೊಂಡ ಶಿವಪ್ಪ.

"ಏಯ್ ನಾನು ಎಂಗಿದ್ರೆ ನಿಮಗೇನ್ರಿ. ಪೋಲೀಸ್ ಕಾನ್‌ಸ್ಟೇಬಲ್ಲೂಂತ ತಿಳೀತಲ್ಲಾ. ಈಗ ಯೋಳ್ರಿ. ಏನು ನಿಮ್ಮೆಸ್ರು. ಯಾವ ವ್ಯವಹಾರ ನಡಸೀರಿ ಇಲ್ಲಿ ?" ಎಂದು ಕಿರುಚಿದ.

"ಅಪ್ಪಾ ನನ್ನ ಹೆಸ್ರು ಗುಂಡಪ್ಪಾಂತ. ರಿಟೈರ್ಡ್ ಶಿರಸ್ತೆದಾರ. ನಮ್ಮಮನೆ ಎಲೆಕ್ಟ್ರಿಕ್ ಬಿಲ್‌ನಲ್ಲಿ ಮಾಮೂಲಾಗಿ ಏರುಪೇರಾಗಿದೆ. ಅದನ್ನ ವಿಚಾರಿಸೋಕೆ ಹೋಗ್ತಿದ್ದೀನಿ" ಎಂದಿತು ಆ ವ್ಯಕ್ತಿ.

"ಅಂಗಾದ್ರೆ ಇಲ್ಲಿ ನೆಲದಾಗೇನು ಉಡುಕ್ತಿವ್ರಿ. ಇಲೆಕ್ಟ್ರಿಕ್ ಆಪೀಸು ನೆಲದಾಗೈತಾ"? ಎಂದು ಕೇಳಿದ.

"ಎಲೆಕ್ಟ್ರಿಕ್ ಆಫೀಸು ಭೂಮಿ ಮೇಲಿದ್ರೇ, ಕ್ಯೂನಿಂತು ನಿಂತು ಬಿಲ್ ಕಟ್ಟೋ ದ್ರೊಳಗೆ ನಮ್ಮ ಹಣ ಬಿದ್ದು ಹೋಗುತ್ತೆ. ಇನ್ನು ಆ ಆಫೀಸು ಭೂಮಿಯ ಒಳಗಡೆಯಿದ್ರೆ ನಮ್ದು ನಾಯಿಪಾಡು ಆಗೋಗುತ್ತೆ ಅಷ್ಟೆ. ಎಂದರು ಗುಂಡಪ್ಪ. "ಆ ಬೋರ್ಡ್ ಬರೆದು ಹಾಕಿದ್ದೀರಲ್ಲ, ಅದನ್ನ ನೀನು ನೋಡಿದೀಯೇನಪ್ಪಾ" ಎಂದು ಅವರು ರಸ್ತೆಯ ಬದಿಯಲ್ಲಿ ನೆಟ್ಟಿದ್ದ ಬೋರ್ಡಿನ ಕಡೆಗೆ ಕೈ ತೋರಿಸಿದರು.

ಕನಿಷ್ಟ ಬಿಲ್ಲೆ ಶಿವಪ್ಪ ಆ ಕಡೆಗೆ ಕಣ್ಣು ಹಾಯಿಸಿದ, ಕಷ್ಟಪಟ್ಟು ಕಾಗುಣಿತ ಗಳನ್ನು ಕೂಡಿಸಿ ಅದನ್ನು ಓದಿದ. "ಪಾದಚಾರಿಗಳು ಕಾಲುದಾರಿಯಲ್ಲೇ ನಡೆಯಿರಿ" ಎಂದು ಬೋರ್ಡಿನಲ್ಲಿ ಬರೆದಿತ್ತು. ಆ ಬೋರ್ಡಿಗೂ ಗುಂಡಪ್ಪ ರಸ್ತೆಯಲ್ಲಿ ಹುಡುಕಾಡುತ್ತಿದ್ದುದಕ್ಕೂ ಸಂಬಂಧವೇನೆಂಬುದೇ ಅವನಿಗೆ ತಿಳಿಯಲಿಲ್ಲ. "ಪುಟ್ ಪಾತ್ ಮ್ಯಾಗೆ ಓಗೀಂತ ಬರದೈತೆ. ಅಷ್ಟೂ ತಿಳಿಯಾಕಿಲ್ವ. ಸಿರಸ್ತದಾರೂ ಅಂತೀರಾ" ಎಂದು ವ್ಯಂಗ್ಯವಾಗಿ ಗುಂಡಪ್ಪನವರನ್ನು ಚುಚ್ಚಿದ.

"ತಿಳಿಯುತ್ತಪ್ಪಾ, ಬೋರ್ಡಿನಲ್ಲಿ ಕಾಗುಣಿತ ಸರಿಯಾಗಿ ಬರೀದಿದ್ರೂ, ಕನ್ನಡ ಭಾಷೇಲಿರೋ ಲಿಪಿ ಅರ್ಥವಾಗುತ್ತೆ. ಆದರೆ ನನ್ನ ಸಮಸ್ಯೆಯೇ ಬ್ಯಾರೆ." ಎಂದರು ಗುಂಡಪ್ಪ. ಇನ್ನಾವ ಸಮಸ್ಯೆ ಈ ಮುದುಕನಿಗೆ ಎನ್ನುವುದು ತಿಳಿಯದೆ ಶಿವಪ್ಪ ತಲೆ ಕೆರೆದುಕೊಂಡು ಪ್ರಶ್ನಾರ್ಥಕವಾಗಿ ಗುಂಡಪ್ಪನವರ ಕಡೆ ನೋಡಿದ.

ಇನ್ನೇನಿಲ್ಲಾಪ್ಪ, ಫುಟ್‌ಪಾತ್ ಮೇಲೆ ಪಾದಚಾರಿಗಳು ಓಡಾಡಬೇಕೂಂತ ಕಾನೂನು ಮಾಡಿ ಬೋರ್ಡ್ ಬರಸಿದ್ದೀರಿ. ಆದ್ರೆ ಓಡಾಡೋಕೆ ಫುಟ್‌ಪಾತೆಲ್ಲಿದೆ? ಅದನ್ನೇ ಆಗ್ಲಿಂದ ನಾನು ಹುಡುಕ್ತಿದ್ದೀನಿ. ಹಾಳಾದ್ದು ಸಿಗ್ತಿಲ್ಲ. ಏನು ಮಾಡ್ಲಿ ಹೇಳು?" ಎಂದರು ಗುಂಡಪ್ಪ. "ನೀನಾದ್ರೂ ಫುಟ್‌ಪಾತ್ ತೋರಿಸಿ ಪುಣ್ಯ ಕಟ್ಟಿಕೋಪ್ಪ" ಎಂದು ಅವರು ಗಂಟುಬಿದ್ದಾಗ ಶಿವಪ್ಪ ಮುಗುಮ್ಮಾಗಿ ನಿಂತ.

ಹೆಸರಿಗೆ ಫುಟ್‌ಪಾತೇನೋ ಇದೆ. ಆದರೆ ಅದರ ಮೇಲೆ ಓಡಿಯಾಡಲು ಜಾಗ ಎಲ್ಲಿದೆ. ವಡೆ ಬೋಂಡಾ ಕರೆಯುವವರು, ಭೇಲ್ ಪುರಿಯವರು. ಹಣ್ಣು-ತರ್ಕಾರಿ, ಮಾರುವವರು ತಳ್ಳೋಗಾಡಿಯಲ್ಲಿಕೂತು ಭಿಕ್ಷೆ ಬೇಡುವ ಕುಷ್ಟರೋಗಿಗಳು, ಬಿಡಾಡಿ ದನಗಳು ಆಕ್ರಮಿಸಿರೋ ಫುಟ್‌ಪಾತಿನಲ್ಲಿ ಪಾದಚಾರಿಗಳು ಓಡಿಯಾಡಲು ಜಾಗವೆಲ್ಲಿದೆ. ಶ್ರೀ ಸಾಮಾನ್ಯ ಗುಂಡಪ್ಪನ ಸವಾಲಿಗೆ ಏನೂ ಹೇಳಲು ತೋರದೆ, ಕಾರುಕಳ್ಳರನ್ನು ಮರೆತು, ಕನಿಷ್ಟಬಿಲ್ಲೆ ಶಿವಪ ಕಾಲಿಗೆ ಬುದ್ಧಿ ಹೇಳಿದ.

ಬೆಂಗಳೂರು ಶಹರಿನಲ್ಲಿ, ರಸ್ತೆಗೆ ಇಳಿಯದೆ ಫುಟ್‌ಪಾತಿನಲ್ಲೇ ಒಂದು ಫರ್ಲಾಂಗ್ ನಡೆದುಕೊಂಡು ಹೋಗಯ್ಯಾ, ನೂರು ರೂಪಾಯಿ ಕೊಡ್ತೀನಿ" ಎಂದು ಒಬ್ಬ ರೇಸಿಗರು ಮತ್ತೊಬ್ಬ ಅಶ್ವ ಶಾಸ್ತ್ರಿಗಳೊಂದಿಗೆ ಬೆಟ್ ಕಟ್ಟುತ್ತಿದ್ದುದರ ಮರ್ಮ ಈಗ ಅವನಿಗೆ ಅರ್ಥವಾಗಿತ್ತು.

ಪುಟ್ಟ ರೋಹಿಣಿ, ಬಣ್ಣ ಬಣ್ಣದ ಕ್ರಯಾನ್ಸ್ ಹರಡಿಕೊಂಡು ಕಾಗದದ ಮೇಲೆ ಯಾವುದೋ ಚಿತ್ರ ಬರೀತಾ ಇದ್ಲು. ಆವಾಗ್ಲೇ ಅವಳ ಚಿಕ್ಕತಾತ ರೂಮಿನೊಳಕ್ಕೆ ಬಂದ್ರು.

"ಏನು ಬರೀತಾ ಇದ್ಯಾ ಪುಟಾಣಿ?" ಅಂತ ಮಗೂನ ಕೇಳಿದ್ರು.

"ಊಂ, ತಾನು, ನಾನು ದೇವರನ್ನ ಬರೀತಾ ಇದೀನಿ" ಅಂದ್ಲು ರೋಹಿಣಿ.

"ದೇವರನ್ನೇ? ದೇವರು ಹೇಗಿದಾನೆ ಅಂತ ಯಾರಿಗೂ ಗೊತ್ತಿಲ್ವಲ್ಲಾ ಪುಟ್ಟಾ"

"ಸ್ವಲ್ಪ ತಡೀರಿ. ಪೂರ್ತಿ ಬರೆದ ಮೇಲೆ ತಾನೇ ಗೊತ್ತಾಗುತ್ತೆ!"

ಹಾಯಿಕು ಮೀಮಾಂಸೆ

ಪ್ರಭಾ

(ಜಪಾನಿ ಕಾವ್ಯದಲ್ಲಿ ಅತ್ಯಂತ ಜನಪ್ರಿಯ ಕಾವ್ಯ ಮಾಧ್ಯಮ ಹಾಯಿಕುಗಳು. ಈ ಪದ್ಯಗಳು 'ಜಗತ್ತಿನ' ಸಾರ ಹಿಡಿಯಲು ಸಹಾಯಮಾಡುತ್ತವಂತೆ !)

೧. **ಹಾಯಿಕು ಅಂದರೇನು ?** ('ಹುಟ್ಟು ಹಾಕುವುದಂತೂ, ಖಂಡಿತ ಅಲ್ಲ)

ಹಾಯಿಕುಗಳು
ಪದಿನೇಳಕ್ಷರದ
ಕವಿತೆಗಳು

೨. **ಹಾಯಿಕು ಲಕ್ಷಣ ಹೇಗೆ ?**

i. ಮೊದಲ ಹಾಗೂ
ಕಡೆಯ ಪಾದಗಳು
ಐದೇ ಅಕ್ಷರ

ii. ಮೂರು ಪಾದದ
ಪದ್ಯದಲಿ ಮಧ್ಯದ್ದು
ಏಳು ಅಕ್ಷರ

೩. **ಹಾಯಿಕು ಏನು ಮಾಡುತ್ತೆ ?** (ದಪ್ಪ ಚರ್ಮದವರಿಗೆ ಹಾಯುವುದಿಲ್ಲ)

i. ಪತ್ತೇಳು ವರ್ಣ
ಸೇರಿ ಹಾಕುವ ಮೋಡಿ
ಅವರ್ಣನೀಯ

ii. ಕೇಳಲು ಇಂಪು
ನೆನಸಲು ಸುಲಭ
ಜಗದ್ವಿಖ್ಯಾತ

iii. ಹೊಸಬರಿಗೆ
ಇದು ಉಕ್ಕಿನ ಕಡ್ಲೆ
ಆಗುವುದಂತೆ

iv. ಬಲಿತವರ್ಗೆ
ಇದು ಸುಲಿದ ಬಾಳೆ
ಹಣ್ಣಿನ ಗೊನೆ

೪. **ಹಾಯಿಕುಗಳೇಕೆ ಅನ್ ಪಾಪ್ಯುಲರು ?**

i. ಹಾಯಿಕುಗಳು
ಅನ್‌ಪಾಪ್ಯುಲರೇಕೆ
ಅಂತಂತಂದರೆ...

ii. ...ಪದಗಳ್ಜೊತೆ
ಸರ್ಕಸ್ ಮಾಡೋ "ದಿಲ್ಲು"
ನಮಗಿಲ್ಲವೇ ? ||

೫. ಹಾಯಿಕು ನಮಗೆ ಬೇಕೆ ?

ಖಂಡಿತ ಬೇಕು
ದಪ್ಪ ಚರ್ಮವ ಚುಚ್ಚಿ
ಖುಷಿ ಪಡಲು !

೬. ಕೆಲವು ಕೊಂಗು ಹಾಯ್ಕುಗಳು

i. 'ದೊಡ್ಡ' ತಮಾಷೆ
ಪೀವಿ ಅನ್ನೋರು
ಈ ದೇಶದ ಪ್ರಧಾನಿ
ಎಂಬುದೇ ಜೋಕು

ii. ಬೆಂಗಳೂರು ಕನ್ನಡಿಗ
ಉರಿವ ಬೆಂಕಿ
ಯಲ್ಲೂ ನಿಶ್ಚಿಂತೆಯಿಂದ
ಮೈ ಮರೆತಾತ

iii. ರಾಜಕಾರಣಿ
ಬ್ರಹ್ಮ ದೇವರು
ಕೋಪಗೊಂಡಾಗ ಗೀಚಿ–
–ದ ವ್ಯಂಗ್ಯ ಚಿತ್ರ

iv. ರಿಮೋಟ್ ಕಂಟ್ರೋಲುಗಳು
ಹೆಣ್ಣಿನ ಕಂಠ
ಗಂಡುಗಳ ರಿಮೋಟ್
ಕಂಟ್ರೋಲುಗಳು ॥

ಪ್ರಣಾಳಿಕೆ

ಗುಡಾಣದ ತೂತುಗಳಿಂದ ನುಸುಳಿ ಬಂದ
ಸೋಪಿನ ನೀರಿನ ಮೇಲಿನ ಗುಳ್ಳೆಗಳಂತಹ
ಪ್ರಣಾಳಿಕೆಗಳು
ಬೆಲೆ (ಏರಿಸುತ್ತೇವೆ) ಇಳಿಸುತ್ತೇವೆ
ಎನ್ನುವ ಆಕಳಿಕೆ
ತಾಳಿ ಭಾಗ್ಯ, ಪುಸ್ತಕ ಭಾಗ್ಯ, ಮಕ್ಕಳ ಭಾಗ್ಯ ಅಂತ
ತಲೆತಿನ್ನುವ ಬಿಕ್ಕಳಿಕೆ

(ಅಭ್ಯರ್ಥಿಗಳಾಗಿ) ನಿಂತವರೆಲ್ಲ
ಬಾಗಿಲಿಗೆ ಬಂದು ಕೈಮುಗಿದು
ಯಾಚಿಸಿದ ಮತ ಗಾಳಿಗೆ ತೂರಿ
ಏಕೆ ಹೀಗೆ ಅಂದಾಗ ಕೈ ಒಗೆದು ಹೋದಾಗ
ಇದ್ದಲ್ಲೇ ಇದ್ದವರು ಹುಡುಕುತ್ತಾರೆ
ಪ್ರಣಾಳಿಕೆಯ ಮಂಡೆಯಲ್ಲಿದ್ದ ಹೇನು

ಎನ್. ಆರ್. ವಾಸುದೇವ ಮೂರ್ತಿ

ಯಾವ ಹುತ್ತದಲ್ಲಿ

–ಶಿವು

ಬುದ್ಧ ಪೂರ್ಣಿಮೆಯ ಸಂಜೆ. ಬೆಳಗಿನಿಂದ ಬಿಸಿಲಿನ ಧಗೆ. ಸಂಜೆ ಧಾರಾಕಾರವಾದ ಮಳೆ. ನಾವೆಲ್ಲಾ ಕ್ಲಬ್ಬು ಸೇರುವ ಹೊತ್ತಿಗೆ ಮಳೆ ನಿಂತು ಆಕಾಶ ಶುಭ್ರವಾಗಿತ್ತು. ಹಾಲು ಚೆಲ್ಲಿದಂತೆ ಬೆಳದಿಂಗಳು, ಹಸಿರು ಹುಲ್ಲಿನ ಹಾಸು. ಹಿತವಾಗಿ ಮೈಯನ್ನು ನೇವರಿಸುತ್ತಿದ್ದ ತಂಗಾಳಿ... ಒಟ್ಟಿನಲ್ಲಿ ಹೇಳೋದಾದ್ರೆ ಅಲ್ಲಿ ನೆರೆದಿದ್ದ ರಾಜಣ್ಣ, ರೆಡ್ಡಿ, ರವಿ ಎಲ್ಲಾರೂ ದಿಢೀರ್ ಕವಿಗಳಾಗೋ ಅಂತಹ ಪರಿಸರ. ಬೀರು ಹೀರಿದ ಮೇಲಂತೂ, ಜ್ಞಾನಪೀಠ ಪ್ರಶಸ್ತಿ ಒಂದು ಬಾಕಿ.

"ನ್ಯಾಯಾಧೀಶರು ಕಳ್ಳರನ್ನ ಖುಲಾಸೆ ಮಾಡಿದರೆ ಅದು ಸುದ್ದಿಯಾಗುಲ್ಲ; ಕಳ್ಳರೆಲ್ಲಾ ಸೇರಿ, ನ್ಯಾಯಾಧೀಶರನ್ನ ಖುಲಾಸೆ ಮಾಡಿದರೆ ಅದು ದೊಡ್ಡ ಸುದ್ದಿ" ಪೂರ್ಣಿಮೆಗೆ ತಕ್ಕ ಹಾಗೆ ಬುದ್ಧನ ಗಾಹೆಯೊಂದನ್ನ ರಾಜಣ್ಣ ಮಂಡಿಸಿದ.

"ಎಷ್ಟು ರಿಡಿಕ್ಯುಲಸ್ ಅಲ್ವಾ. ಹದಿನೈದು ಲಕ್ಷ ಬರೀ ಮನೆ ಕುರ್ಚಿ ಮೇಜಿಗೆ. ಇನ್ನು ಯಾವ ಯಾವ ಬಾಬ್ತಿಗೆ ಇನ್ನು ಎಷ್ಟೆಷ್ಟೊ. ಅದೇ ನಮ್ಮ ಡೋಂಗ್ರೆಗೆ ಬರೀ ಹತ್ಸಾವ್ರ ತೆರಿಗೆ ಕಮ್ಮಿ ಆಯ್ತು ಅಂತ ಐದ್ಸಾವ್ರ ಪೆನಾಲ್ಟಿ. ಇದೆಂಥಾ ದೇಶಾನೋ ಒಬ್ಬೊಬ್ರಿಗೆ ಒಂದೊಂದು ಕಾನೂನು" ಬಾಲುವಿನ ಉದ್ಗಾರ.

"ಹಾಗೆನ್ನಬೇಡ ಬಾಲು, ನ್ಯಾಯಾಂಗದ ಸ್ವಾತಂತ್ರ್ಯನ, ಶಾಸಕಾಂಗ ಎತ್ತಿ ಹಿಡಿದು, ಕಾರ್ಯಾಂಗಾನ ಇಕ್ಕಟ್ಟಿನಿಂದ ನುಣುಚಿಕೊಳ್ಳೊ ಹಾಗೆ ಮಾಡ್ತು ಅಷ್ಟೆ. ಇದೆಲ್ಲಾ ಹೈಯ್ಯರ್ ವ್ಯಾಲ್ಯೂ ಸಿಸ್ಟಮ್ಸ್. ನಿಮ್ಮಂಥ ಪಾಮರರಿಗೆ ಅರ್ಥ ಆಗೋಲ್ಲ" ರೆಡ್ಡಿ ಬೇಕೂ ಅಂತ್ಲೇ ಬಾಲುನ ರೇಗಿಸ್ತಿದ್ದ ಹಾಗೆ ಕಾಣಿಸ್ತು.

ಆಗ ದೇವು ಬಂದ. ದೇವುವಿನ ಆಗಮನ ನಮ್ಮ ಗುಂಪಿನ ಹರಟೆನ ಅಲ್ಲಿಗೇ ತುಂಡರಿಸಿತು.

"ಅಲ್ರೋ ಕುರುಡು ನನ್ಮಕ್ಳಾ, ಇಂತಹ ಸುಂದರ ಸಂಜೆ, ಬುದ್ಧ ಪೂರ್ಣಿಮೆ ಪ್ರೇಯಸಿಯ ಸ್ಪರ್ಶದಂತೆ ಮಾದಕವಾಗಿರುವ ತಂಪುಗಾಳಿ, ಇಂತಹ ಪರಿಸರದಲ್ಲಿ ಹೊಲಸು ರಾಜಕೀಯ ಮಾತಾಡ್ತಾ ಇದ್ದೀರಲ್ಲ, ಇನ್ನಾವ ಗಹನವಾದ ವಿಷಯಾನೇ ಸಿಕ್ಲಿಲ್ವೇ" ?

ದೇವು ಹೇಳಿದ್ದು ನಿಜ. ಅಂದಿನ ಪ್ರಕೃತಿ ಸೌಂದರ್ಯ ನಮ್ಮಂತಹ ಎಷ್ಟೋ ಕೋಣಗಳನ್ನೂ ಯಾವುದೋ ಮಾಯೆಯ ಜಗತ್ತಿಗೆ ಒಯ್ಯುವಂತಿತ್ತು.

"ನೀನೇ ಹೇಳೋ ದೇವು, ಆತ್ಮ ಸಂಸ್ಕಾರಕ್ಕೆ ಮಾರ್ಗ ಯಾವುದು ಅಂತ"

ಶಾಂತು ರೂಪಕ ನುಡಿದ.

ದೇವು ಅದನ್ನ ಗಮನಕ್ಕೆ ತಂದುಕೊಳ್ಳಲಿಲ್ಲ.

"ಹೇಳ್ತೀನಿ ಮೊದಲು ನೀವೆಲ್ಲಾ ನಿಮ್ಮ ನಿಮ್ಮ ಫೇವರೆಟ್ ಬರಹಗಾರರು ಯಾರು ಅಂತ ಹೇಳಿ"

ರಾಜ "ನನ್ನ ಅತಿ ಮೆಚ್ಚುಗೆಯ ಬರಹಗಾರರು, ಕಡಲ ತೀರದ ಭಾರ್ಗವ ಶಿವರಾಮ ಕಾರಂತರು" ಅಂದ.

ರೆಡ್ಡಿ "ಟಿಪಿಕಲ್ ಟಿ.ಪಿ. ಕೈಲಾಸಂ ಅಂದ್ರೆ ನಂಗೆ ತಿಪ್ಪಾರಳ್ಳಿ ಬೋರನ ತರಹ ಮೈ ಝುಂಝುಂ ಅನ್ನುತ್ತೆ" ಅಂತ ಹೇಳಿ ಒಂದು ಹೊಗೆ ಸುರುಳಿ ಬಿಟ್ಟ.

ರವಿ "ಕವಿ ಪುಂಗವ ಕುವೆಂಪು, ಎನ್ನ ಮನವ ಸೂರೆಗೊಂಡಿರ್ಪರ್" ಅನ್ನೋ ಅಷ್ಟರಲ್ಲಿ, ಅವನಿಗೆ ನೆತ್ತಿ ಹತ್ತಿತು ಅಂತ ಕಾಣುತ್ತೆ. ಎರಡು ಬಾರಿ ಕೆಮ್ಮಿ ನಿಲ್ಲಿಸಿ "ಅಲ್ತೆ!" ಅಂತ ತನ್ನ ವಾಕ್ಯ ಮುಗಿಸಿದ.

ದೇವು "ಆಯ್ತು. ಈಗ ಒಂದು ಸನ್ನಿವೇಶ ಕಲ್ಪಿಸ್ತೀನಿ. ಅದನ್ನ ಈ ಮೂರು ಪ್ರಭೃತಿಗಳು ತಮ್ಮ ತಮ್ಮ ಮೆಚ್ಚಿನ ಬರಹಗಾರರ ಶೈಲಿಯಲ್ಲಿ ವಿವರಿಸ್ಬೇಕು. ಎರಡು ರೌಂಡ್ ಆದಮೇಲೆ ಅತಿ ಚೆನ್ನಾಗಿ ಅನುಕರಣೆ ಮಾಡಿದೋನಿಗೆ ಒಂದು ಬಾಟಲ್ ಆರ್ನ್ಸಿ, ರೆಡೀನಾ" ಅಂತ ಕೇಳಿದ.

ಇದೇನು ಬಂತಪ್ಪಾ, ನಾಡಿನ ಹೆಸರಾಂತ ಸಾಹಿತಿಗಳಿಗೆ ಇಂತಹಾ ಆಪತ್ತು ಅಂತ ನನಗೆ ಗಾಬರಿ ಆಯಿತು. ರಾಜ, ರೆಡ್ಡಿ, ರವಿ ನಿರಾತಂಕವಾಗಿ 'ರೆಡಿ' ಅಂದರು ದೇವು ಶುರುಮಾಡಿದ.

"ನೋಡ್ರಪ್ಪ, ನಮ್ಮ ಪ್ರಧಾನಿಗಳು, ಉಪಾಯದಿಂದ ಶರದ್ ಪವಾರರನ್ನು

ಮಹಾರಾಷ್ಟ್ರಕ್ಕೆ ಕಳಿಸಿದ್ದಾರೆ. ಈಗ ಪವಾರರು ಪ್ರಧಾನಿಗಳನ್ನು ನೋಡಲು ದೆಹಲಿಗೆ ಬಂದಿದ್ದಾರೆ. ಆಗ ನಡೆಯಬಹುದಾದ ಘಟನಾವಳಿಗಳನ್ನ ವಿವರಿಸಿ ನೋಡೋಣ"

ರಾಜ ಗಂಟಲು ಸರಿಮಾಡಿಕೊಂಡು ಪ್ರಾರಂಭಿಸಿದ.

"ಎಪ್ಪತ್ತರ ಅಂಚನ್ನು ಮುಟ್ಟಿದ ದೇಹ ನರಸಿಂಹನದು. ಗುಂಡಾದ ಮುಖ, ಮುಖದಲ್ಲಿ ಎತ್ತಿ ಕಾಣುವ ಮೂಗು. ಬೊಚ್ಚು ಎನ್ನಲಾಗದಿದ್ದರೂ, ತೊಟ್ಟ ಕೃತಕ ಹಲ್ಲುಗಳು ಬೊಚ್ಚನ್ನೆ ಸಾಧಿಸಹೊರಟಂತಿರುವ ಬಾಯಿ. ಬೋಳು ತಲೆಯ ಮೇಲೆ ಹಾರಾಡುತ್ತಿರುವ ಒಂದೆರಡು ನರೆಗೂದಲುಗಳು, ಶುಭ್ರವಾದ ಬಿಳಿಯ ಜುಬ್ಬ, ಪಾಯಿಜಾಮ. ನವ ದೆಹಲಿಯ ತನ್ನ ಭವ್ಯ ನಿವಾಸದಲ್ಲಿ ಸೋಫಾದ ಮೇಲೆ ಕುಳಿತು ಸಂಜೆ ಮುಂಜಾನೆಗಳ ತನ್ನ ಬಿಡುವಿನ ಸಮಯವನ್ನು ಕಳೆಯುವುದೇ ಆತನ ಹವ್ಯಾಸ. ನರಸಿಂಹ ನೇರವಾದ ಮನುಷ್ಯ ಅಂದರೆ ಆ ಮಾತು ತಪ್ಪಾದೀತು. ಏನನ್ನೂ ನಿರ್ಧರಿಸಲೊಲ್ಲ ಎಂದರೆ ಆ ಮಾತೂ ಸಮನೆ"

ರಾಜ ನಿಲ್ಲಿಸುವುದನ್ನೇ ಕಾಯುತ್ತಿದ್ದ ರೆಡ್ಡಿ, ತಾನು ಪ್ರಾರಂಭಿಸಿದ. "ಲಾಲಿಸ್ಬೇಕೂ, ಮಹಾಜನಗ್ಳು ಲಾಲಿಸ್ಬೇಕೂ. ನಾಟ್ಕಾ ಶುರುವಾಗುತ್ತೆ. ದೆಹಲಿ ಸಿಂಹಾಸನ, ಸಿಂಹಾಸನ ಏನ್ಬಂತೂ, ನರಸಿಂಹಾಸನ. ನರಸಿಂಹ ಆಸನಾಸೀನನಾಗಿದ್ದಾನೆ. ಭಟರು ಪವಾರ ನನ್ನ ಒಳಗೆ ಬಿಡ್ತಾರೆ.

ಪವಾರ :–"ದೂರ ಕಳ್ಸಿ ನನ್ಗೆ ವನ್ವಾಸ, ವನ್ವಾಸ ಹಾಕ್ಬಿಟ್ರಿ. ಇನ್ನಾದ್ರೂ...

ನರಸಿಂಹ :–ಏನ್ ಟೆರಿಬಲ್ ಟಂಗೂ ನಿಂದು. ನಿನ್ನ ವನ್ವಾಸ ಕಳಿಸೋದಕ್ಕೆ ನಾನೇನು ದಶರಥ ಕೆಟ್ಕೋದ್ನೆ. ನಮ್ಮ ನಾಡಿನ ನಿಯೋನೇತ ನಾನ್ ಡಿಸೈಡಿಂಗ್ ನರಸಿಂಹ ನಾನು"

ತನ್ನ ಸರದಿ ಕಾಯುತ್ತಿದ್ದ ರವಿ ಸಮಯ ನೋಡಿ ಬಾಯಿಹಾಕಿದ.
"ಶರದ ಪೇಳ್ದ ನೀಪರಿಯಲಿ.

"ಸೋತು ಬಂದೆನೋ. ಗುರುವೆ ನಿನ್ನ ಬಳಿಗೆ
ನೋತ ಜೀವವನಾತುಕೋ ಒಂದು ಗಳಿಗೆ
ನೀನೆಂತು ಪೊರೆವೆಯೋ ಅದನು ನಾನರಿಯೆ
ನೀ ಪೊರೆವೆ ಎಂಬುದನು ಮಾತ್ರ ನಂಬಿರುವೆ."

ನರಸಿಂಹ:– ನಿನ್ನ ಸುಲಿಗೆಯ ಕತೆಯ ನೋಡುತಿರೆಯಿರೆ ಕಣ್ಣು
ಹನಿ ತುಂಬಿ ಮಂಜಾಗುವುದು; ದೈನ್ಯದಲಿ ನೊಂದು
ನರಳುವುದು ಬಗೆ; ಕುದಿಯುವುದು ನೆತ್ತರೆದೆ ಬೆಂದು
ಬಿಸು ಸುಯ್ಯುವುದು; ಕೋಪದುದ್ರೇಕದಲಿ ಮಣ್ಣು
ಗೂಡುತೆ ಮನಶ್ಶಾಂತಿ, ಸ್ಥಿರಣೆ ಸಮತೆಗೆಟ್ಟು,

ತಿರುಗಿ ರಾಜ cut-in ಮಾಡಿದ

"ದೆಹಲಿಗೆ ಬಂದ ಶರದನ ಚಿಂತೆ ನೂರಾರು ಬಗೆಯಾಗಿತ್ತು. ಅವನು ಸಂಚರಿಸುತ್ತಿದ್ದ ನಾಡು, ಮೋಸದ ಬೀಡು ಎಂಬ ಮಾತಂತೂ ಅವನಿಗೆ ಎಂದೋ ಖಚಿತವಾಗಿತ್ತು...

ಈ ವಾತು ಕತೆಗಳಲ್ಲೇ ತಲ್ಲೀನನಾಗಿದ್ದ ನಾನು ಒಮ್ಮೆಲೇ ತಲೆಯೆತ್ತಿ ನೋಡಿದೆ. ಕ್ಲಬ್ಬಿನ ಎಲ್ಲಾ ಸದಸ್ಯರೂ ತಮ್ಮ ತಮ್ಮ ಕುರ್ಚಿಗಳಿಂದ ಎದ್ದು ನಮ್ಮ ಗುಂಪನ್ನು ಸುತ್ತುವರಿದಿದ್ದರು. ನನ್ನ ಹಿಂದೆ ನಿಂತಿದ್ದ ಸದಸ್ಯನೊಬ್ಬ ತನ್ನ ಪಕ್ಕದಲ್ಲಿ ನಿಂತಿದ್ದ ಗೆಳೆಯನಿಗೆ ಪಿಸುವಾತಿನಲ್ಲಿ

"ಇವತ್ತು ಪೋರ್ಣಿಮಿ ಅಲ್ವೇನೋ, ಅದಕ್ಕೆ..."ಅಂದ. ಗೆಳೆಯ ಕಿಸಕ್ಕನೆ ನಕ್ಕಿದ.

ಪರಿಸ್ಥಿತಿ ಪ್ರಕೋಪಕ್ಕೆ ಹೋಗೋದಕ್ಕೆ ಮುಂಚೆ ಮನೆ ಸೇರ್ಕೊಳ್ಳೋದು ವಾಸಿ ಅಂತ ನಾನು ಆ ಗೆಳೆಯರ ಮಧ್ಯೆ ನುಸುಳಿದೆ.

ಕಿವಿಮಾತು

ಸೂರ್ಯ
ಎಲ್ಲರಿಗೂ
ಮಿತ್ರ
ಆದರೂ
ಹೋಗದಿರಿ
ತೀರ ಹತ್ರ

ಎಚ್. ದುಂಡಿರಾಜ್

ಆತ, ಆಕೆ ಮತ್ತು ನಾನು

ವಿಜಯ ಸಚ್ಚಿದಾನಂದ

ಆತ

ಆತನ ವಯಸ್ಸು ಸುಮಾರು 65ರ ಮೇಲೆ 70ರ ಒಳಗೆ ಎಂದು ಹೇಳಬಹುದು. ಕೃಶಕಾಯ, ಬಕ್ಕತಲೆ, ಮಧ್ಯಮ ವರ್ಗದ ಸರ್ಕಾರಿ ನೌಕರನಾಗಿದ್ದನೆಂದು ಮುಖದ ಕಳೆಯೇ ಹೇಳುತ್ತಿತ್ತು of course ಈಗ ನಿವೃತ್ತಿಯಾಗಿದ್ದಾರೆಂದು ಯಾರು ಬೇಕಾದರೂ ಊಹಿಸಬಹುದಾಗಿತ್ತು.

ಉಡುಪು ಒಮ್ಮೊಮ್ಮೆ ಆಡಂಬರದ ಸೂಟು ಬೂಟು, ಟೈ ಆದರೆ ಮತ್ತೊಮ್ಮೆ ದಪ್ಪ ಷರ್ಟ್ (ಇಸ್ತ್ರಿ ಕಂಡಿದ್ದರೂ ಉಂಟು ಇಲ್ಲದಿದ್ದರೂ ಸರಿ) ಕೈಯಲ್ಲಿ ಸದಾ ವಾಕಿಂಗ್ ಸ್ಟಿಕ್ಕೊಂದು. ತಿಂಗಳಲ್ಲಿ ಇಪ್ಪತ್ತು ದಿವಸ ಚೌರ ಕಾಣದ ಕುರುಚಲು ಗಡ್ಡದ ಮುಖ.

ಆಕೆ

ವಯಸ್ಸು ಸುಮಾರು 40 ರಿಂದ 45ರ ಒಳಗೆ ಎಂದು ಯಾರಾದರೂ ಊಹಿಸ ಬಹುದಾಗಿತ್ತು. ಅತ್ಯಂತ ಆಧುನಿಕ ಉಡುಪು ತೊಡಪಿನ ಆಕೆ ಸುಂದರಿ. ಅಲ್ಲದೆ ಆಕೆಯ ಉಡುಪು ತೊಡಪು ಆಕೆಯ ರೂಪಿಗೆ ಮೆರಗು ಕೊಟ್ಟಂತಿರುತ್ತಿತ್ತು. ಶ್ರೀಮಂತೆಯೂ ಹೌದೆಂದು ನೋಡಿದೊಡನೆಯೇ ಗೊತ್ತಾಗುತ್ತಿತ್ತು.

ನಾನು

ನಾನು ನಾನಷ್ಟೆ. ನನ್ನ ಪರಿಚಯ ಅತ್ಯಂತ ಅನಗತ್ಯ. ಕಂಡದ್ದನ್ನು ಕಂಡಹಾಗೆ ಹೇಳುವ ಚೇಷ್ಟೆ ಮಾಡುತ್ತಿರುವ ಈ ನಾಟಕದ ಸಾಮಾನ್ಯ ಪ್ರೇಕ್ಷಕಿಯಷ್ಟೆ!

ಅವರನ್ನು ನಾನು ದಿನಾ ಭೇಟಿಯಾಗುತ್ತಿದ್ದೆ. ಈಗಲೂ ಆಗುತ್ತಿರುತ್ತೇನೆ. ದೈವವಶಾತ್ ನಮ್ಮ ಮೂವರ ಮಾರ್ನಿಂಗ್ ವಾಕಿನ ಟೈಂ ಹೆಚ್ಚೂ ಕಮ್ಮಿ ಒಂದೇ. ಬೆಳಗ್ಗೆ ಸುಮಾರು 6 ರಿಂದ 6-30ರಲ್ಲಿ ಒಬ್ಬರಿಗೆ ಒಬ್ಬರು ಎದುರಾಗುತ್ತೇವೆ. ಆತ ತಮ್ಮ ವಾಕಿಂಗ್ ಸ್ಟಿಕ್ಕನ್ನು ಬೀಸುತ್ತಾ ಅಧೋವದನರಾಗಿ ಹುಬ್ಬನ್ನು ಗಂಟಿಕ್ಕಿ ನಡೆಯುತ್ತಿದ್ದರೆ ಪ್ರಪಂಚದ ಭಾರವೆಲ್ಲಾ ತಮ್ಮ ಮೇಲೆ ಬಿದ್ದಿದೆಯೇನೋ ಎನ್ನುವ 'ನೋಟ' (look). ಯಾರಾದರೂ ಎದುರು ಬಂದಾಗ್ಯೂ ನಗುವುದು ದೂರವಿರಲಿ ಗುರುತು ಹಿಡಿಯುವರೋ ಇಲ್ಲವೋ ಎನ್ನುವುದೇ ಅನುಮಾನ. ಮೂಗಿನ ಸೇತುವೆ

ಯಿಂದ ಕೆಳಗೆ ಇಳಿಯುತ್ತಿದ್ದ ಕನ್ನಡಕವನ್ನು ತನ್ನ ತೋರು ಬೆರಳಿಂದ ಮೇಲೇರಿಸುತ್ತಾ ಮುಂಪ್ಪೆಜ್ಜೆ ಹಾಕಿ ಬಿಡುವ ಆಸಾಮಿ.

ಆತನ ತದ್ವಿರುದ್ಧ ಆಕೆ. ತಮ್ಮ ಮುಂದೆ ಬಂದವರನ್ನೆಲ್ಲಾ ಕಂಡು ಆಕೆ ಮುಗುಳ್ನಗುವುದಿರಲಿ ಆಕೆಯ ಜೊತೆಯಲ್ಲಿರುತ್ತಿದ್ದ ಆ ಶ್ರೀಮಂತ ಬಿಳಿ "ಪೊಮರೇನಿಯನ್" ಸಹ ಮುಗುಳ್ನಗುವಂತೆ ತೋರುವುದು.

ದೇವರ ಮೇಲೆ ಹೂವು ತಪ್ಪಬಹುದು. ಆದರೆ ನಮ್ಮ ಪರಸ್ಪರ ಭೇಟಿ ತಪ್ಪುತ್ತಿರಲಿಲ್ಲ. ಅರ್ಥಾತ್ ನಮ್ಮ ಬೆಳಗಿನ ಹವಾಸೇವನೆಯನ್ನು ಯಾರೂ ಯಾವ ಕಾರಣಕ್ಕಾಗಿಯೂ ಇದುವರೆಗೆ ತಪ್ಪಿಸಿಕೊಂಡವರಲ್ಲ. ಎದರು ಬದರು (ಬದರು ಎದುರು) ಎಂಬಂತೆ ದಿನಾ ಭೇಟಿಯಾಗುತ್ತಿದ್ದೆವಾದರೂ ಒಂದು ದಿನವಾದರೂ ಒಬ್ಬೊರಿಗೊಬ್ಬರು ಒಂದು ಪದವನ್ನಾಗಲಿ ಮಾತನಾಡಿದವರಲ್ಲ. ಆದರೂ ಮೂವರೂ ಒಂದು ತರಹ ಸ್ನೇಹಿತರೇ ಎನ್ನಬಹುದು.

ಅಂದು ಏನೋ ಒಂದು ತರಹ ಬದಲಾವಣೆ ತೋರುತ್ತಿತ್ತು. ಎಲ್ಲವೂ ಅದಲು ಬದಲು. ಏನಾಗಿದೆಯೆಂದು ನಿಗದಿತವಾಗಿ ಹೇಳಲಾಗುತ್ತಿರಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ ಕಾರಣ ಹೊಳೆಯಿತು ಎಂದೂ ಅಧೋವದನನಾಗಿರುತ್ತಿದ್ದ ಆತ ಹಸನ್ಮುಖಿಯಾಗಿದ್ದರು. ನಡೆತದಲ್ಲೂ ಏನೋ ಒಂದು ತರಹ ಬದಲಾವಣೆ ಕಾಣುತ್ತಿತ್ತು. ಕೈಯಲ್ಲಿ ವಾಕಿಂಗ್ ಸ್ಟಿಕ್. ಜೊತೆಗೆ ಒಂದು ಬಿಳಿ ಕಾಗದದ ಬಂಡಲ್ ಬೇರೆ. ಸ್ವಲ್ಪ ಸೂಕ್ಷ್ಮವಾಗಿ ನೋಡಿದ್ದಲ್ಲಿ ಆಹ್ವಾನ ಪತ್ರಿಕೆಗಳೆಂದು ದೂರದಿಂದಲೇ ಹೇಳಬಹುದಾಗಿತ್ತು. ನನ್ನ ಹತ್ತಿರ ಬರುತ್ತಿದ್ದಂತೆ ಕೈಯಲ್ಲಿದ್ದ ಕಾರ್ಡನ್ನು ಕೊಡುತ್ತಾ

"ಹ್ಹ ಹ್ಹ ! ನನಗೆ ಷಷ್ಠಿ ಪೂರ್ತಿ ಶಾಂತಿ, ಖಂಡಿತಾ ಬರಬೇಕು. ದಯವಿಟ್ಟು ತಮ್ಮ ಹೆಸರು ವಿಳಾಸ ತಿಳಿಸಿ. ಇದೇ ತಾನೇ 'ಆಕೆ'ಗೂ ಕೊಟ್ಟೆ. ಬಂದೇ ಬರಬೇಕಮ್ಮಾ ಹ್ಹ ಹ್ಹ" ಎಂಬ ಪ್ರೀತಿಯ ಆಹ್ವಾನ. ಕೋಲನ್ನು ಬೀಸುತ್ತಾ ಮುಂದೆ ಹೆಜ್ಜೆ ಹಾಕಿದರು. ಅರವತ್ತರ ಮೆಟ್ಟಿಲು ಹತ್ತಿದ ಆನಂದ ಮುಖದಲ್ಲಿ ತಾಂಡವಾಡುತ್ತಿದ್ದಂತಿತ್ತು ಆ ನಗು.

ಆಕೆ ಇನ್ನೂ ಅಂದು ಕಣ್ಣಿಗೆ ಬಿದ್ದಿರಲಿಲ್ಲ. ಆತ ಇದೇ ಕೊಟ್ಟೆನೆಂದು ಹೇಳಿದ ಆಹ್ವಾನ ಪತ್ರಿಕೆಯೊಂದಿಗೆ ಮಾಯವಾಗಿಬಿಟ್ಟರೇನೋ ಅಂದುಕೊಂಡು ನನ್ನ ವಾಕ್ ಮುಂದುವರೆಯುತ್ತಿದ್ದೆ. ಅಲ್ಲಿಯ ಪಾರ್ಕಿನ ಬೆಂಚಿನೊಂದರ ಮೇಲೆ ಆಕೆ ಕುಳಿತಿದ್ದುದು ಕಣ್ಣಿಗೆ ಬಿತ್ತು. ದಿನಾ brisk ವಾಕ್ ಮಾಡುತ್ತಿದ್ದಾಕೆ ಇದೇಕೆ ಹೀಗೆ ಕೂತರು ಎಂದೂ ಅನ್ನಿಸಿತು. ಆಕೆಯ ತೊಡೆಯ ಮೇಲೆ ಶ್ರೀಮಂತ ಪೊಮೆರೇನಿಯನ್

ಆಸನೀಯುವಾಗಿತ್ತು. ನನಗರಿವಿಲ್ಲದಂತೆ ನನ್ನ ಕಾಲುಗಳು ನನ್ನನ್ನು ಆಕೆಯೆದುರ್ದ್ದುಡೆಗೆ ಎಳೆದೊಯ್ದುವು. ಆಕೆಯ ಮುಖ ಕಳಗುಂದಿದೆ. ಏನೋ ಒಂದು ತರಹದ ದುಗುಡ ಮುಖದ ಮೇಲೆ ಮನೆ ಮಾಡಿದೆ ತೊಡೆಯ ಮೇಲಿನ ಪೊಮರೇನಿಯನ್ ಸಹ ಮ್ಲಾನವಾಗಿದೆ. ಆಕೆ ಕೈಲಿದ್ದ ಆಹ್ವಾನ ಪತ್ರಿಕೆಯನ್ನೇ ದಿಟ್ಟಿಸುತ್ತಿದ್ದಾರೆ. ನಾನು ಹತ್ತಿರವಾಗುತ್ತಿದ್ದಂತೆ ರೊಯ್ಯನೆ ಕಾಲಿನ ಹತ್ತಿರ ಬಂದು ಬಿದ್ದಿತು ಆಹ್ವಾನ ಪತ್ರಿಕೆ. ಹಿಂದೆಯೇ ಬಂದಿತ್ತು ಆಕೆಯ ಕರ್ಕಶ ಧ್ವನಿ.

"ಹಾ! ನೋಡಿದಿರಾ ಆತನಿಗೆ ಅರವತ್ತೇ ವರ್ಷಾಂತೆ ಷಷ್ಠ್ಯಿ ಪೂರ್ತಿ ಶಾಂತಿ ಯಂತೆ. ಒಳ್ಳೆ ನೂರು ವರ್ಷದವನ ಹಾಗೆ ಕಾಣ್ತಾನೆ. ನಂಬ್ತೀರಾ ಅವನಿಗೆ ಅರವತ್ತೊಂದ್ರೆ. ಹಾಗಾದ್ರೆ ನನ್ನ ವಯಸ್ಸೇನ್ರಿ ಅವನಿಗೆ ! ಇಲ್ಲ ಸುಳ್ಳು ಸುಳ್ಳು ನಾನೂ ಹಾಗೇ ಕಾಣ್ತೇನೇನ್ರಿ" ಕೈನಿಂದ ಮುಖ ಮುಚ್ಚಿಕೊಂಡರಾಕೆ ಉಗುರಿಗೆ ಬಳಿದಿದ್ದ ರಂಗು ಫಳ ಫಳ ಎಂದಿತು. "ಸುಳ್ಳು ಮುದುಕ!" ಆಕೆ ಅಳುವುದೊಂದು ಬಾಕಿಯಷ್ಟೆ. ಆಕೆಗೆ ಅರವತ್ತು ನನಗಂತೂ ನಂಬಲಾಗಲಿಲ್ಲ. ಅಷ್ಟು ಜೋಪಾನ ವಾಗಿ ಕಾಪಾಡಿಕೊಂಡಿದ್ದರು ತಮ್ಮ ಯೌವನವನ್ನು ಆ ಚಿರ ಯೌವನೆ. ಈ ಸಂದರ್ಭ ವಲ್ಲದೆ ಬೇರೆ ಯಾವ ಕಾರಣಕ್ಕಾದರೂ ತನ್ನ ನಿಜ ವಯಸ್ಸನ್ನು ಹೊರಗೆಡಹುತ್ತಿದ್ದರೆ ಆಕೆ ಖಂಡಿತಾ ಇಲ್ಲ !

ನನಗರಿವಿಲ್ಲದಂತೆ ನನ್ನಿಂದ ಒಂದು ದೊಡ್ಡ ನಿಟ್ಟುಸಿರು ಹೊರಬಿತ್ತು. ನಡು ಮೂವತ್ತರಲ್ಲಿದ್ದ ನನ್ನ ಅರ್ಧಕ್ಕೂ ಹೆಚ್ಚು ಹಣ್ಣಾದ ಕೂದಲನ್ನು ಸವರಿಕೊಂಡೆ. ಮನೆಯಿಂದ ಹೊರ ಬೀಳುವ ಮುನ್ನ ಕನ್ನಡಿಯಲ್ಲಿ ನೋಡಿಕೊಂಡಾಗ ಕಣ್ಣಿಗೆ ಬಿದ್ದ ಆ ಬಿಳಿ ಕೂದಲು, ಕಣ್ಣುಗಳ ತುದಿಯಲ್ಲಿ ರಾರಾಜಿಸುತ್ತಿದ್ದ ಕಾಗೆ ಪಾದಗಳು ಅಥವಾ ನಗು ರೇಖೆಗಳು (laughing lines) ಅಂತಲೇ ಅನ್ನೋಣವೊ ? ಕಂಡು ಕಣ್ಣು ಮುಚ್ಚಿದ್ದೆನಲ್ಲದೆ ಕನ್ನಡಿಯನ್ನೂ ದೂರ ಸರಿಸಿದ್ದೆ.

ಆದರೂ ಆಕೆಯನ್ನು ಸಮಾಧಾನಿಸಲೇ ಬೇಕಾಗಿತ್ತು. ಸಮಯಕ್ಕೆ ಸರಿಯಾಗಿ ಎಂದೋ ಎಲ್ಲೋ ಕೇಳಿದ್ದ ಹೇಳಿಕೆಯೊಂದು ಜ್ಞಾಪಕಕ್ಕೆ ಬಂತು. "A woman is as young as she looks" ಎಂದೆ. ದುಗುಡದಲ್ಲಿದ್ದ ಆಕೆಗೆ ಅರ್ಥವಾಯಿತೋ ಇಲ್ಲವೋ ಗೊತ್ತಾಗಲಿಲ್ಲ. ನನಗೇನೋ ಚೆನ್ನಾಗಿ ಅರ್ಥವಾಗಿತ್ತು. ಅದಕ್ಕೇ ಅಲ್ಲವೇ ಮನೆ ಸುತ್ತ ಮುತ್ತ ಮತ್ತು Officeನಲ್ಲೂ ಸಹ ನನಗಿಂತ ಹಿರಿಯರು ನನ್ನನ್ನು "ಆಂಟಿ" ಎಂದು ಪ್ರೀತಿಯಿಂದ ಸಂಬೋಧಿಸುವುದು.

ಹಾಸ್ಯ ಲೇಖನ

—ಪ್ರಕಾಶ್

ಮೊನ್ನೆ ಮೈಸೂರಿಗೆ ಹೋಗಿದ್ದೆ, ನಂ ಚಿಕ್ಕಪ್ಪನ ಮನೆಗೆ. ಸಂಜೆ ಅವನ ಸ್ನೇಹಿತರಿಬ್ಬರು ಬಂದಿದ್ದರು. ಒಬ್ಬ ಲಾರೆಲ್, ಇನ್ನೊಬ್ಬ ಹಾರ್ಡಿ! ಸೋಮು ಚಿಕ್ಕಪ್ಪ ನನ್ನ ಇನ್‌ಟ್ರಡ್ಯೂಸ್ ಮಾಡಿದ. "ಇವನು ಪ್ರಕಾಶ್ ಅಂತ, ವೈದ್ಯ ಆದರೂ ಹಾಸ್ಯ ಲೇಖನಗಳನ್ನ ಬರೀತಾನೆ.!" ಅದೇನು ಗೂಡಾರ್ಥವೋ ನನಗೆ ಗೊತ್ತಾಗಲಿಲ್ಲ. 'ವೈದ್ಯರೇನು ಮನುಷ್ಯರಲ್ಲವೆ?' ಅಂದೆ. ಅವರೆಲ್ಲ ನಕ್ಕರು. ಇವನು ಅವರಣ್ಣ ಜತೆ ಸೇರಿ ಒಂದು ಹಾಸ್ಯ ಪತ್ರಿಕೇನೂ ಪಬ್ಲಿಷ್ ಮಾಡ್ತಿದಾರೆ ಅಂತ ಸೋಮು ಹೇಳಿದ. ನಾನು ಕ್ಷಮೆಗೆ ಅರ್ಹವಾಗಿಲ್ಲದೆ ಕ್ರೈಂ ಮಾಡಿದ ಅಪರಾಧಿಯಂತೆ ಗಂಭೀರವಾಗಿ ನಿಂತೆ! ಸೋಮು ಫ್ರೆಂಡು (ಲಾರೆಲ್. ಹಾರ್ಡಿ ಅಲ್ಲ – ಹಾರ್ಡಿಯಂತೂ ಕೆಲವು ಪದಗಳ ಮನುಷ್ಯ!) ನಾನೂ ಹಾಸ್ಯ ಲೇಖನ ಗಳನ್ನ ಬರೀತೀನಿ! ಅಂದ. ಅಪರಂಜೀಗೆ ಕಳಿಸಿ, ಚೆನ್ನಾಗಿದ್ರೆ ಪಬ್ಲಿಷ್ ಮಾಡ್ತಾರೆ ಸಂಪಾದಕರು ಅಂದೆ. ನಾನು ಚೆನ್ನಾಗಿದ್ರೆ ಅಂದಿದ್ದೇ ತಪ್ಪಾಯಿತು! ಲಾರೆಲ್‌ಗೆ ನಖ ಶಿಖಾಂತ ಕೋಪ ಬಂತು. ನಾನು ಬರೆದಿರೋ ಲೇಖನಗಳಲ್ಲಿ ಚೆನ್ನಾಗಿದ್ರೆ ಅನ್ನೋ ಪ್ರಶ್ನೇನೇ ಬರೋದಿಲ್ಲ! ನನ್ ಸ್ನೇಹಿತರು, ಕ್ಲಬ್ಬಿನಲ್ಲಿ ಈ ಕತೆಗಳನ್ನ ಕೇಳಿ, ಈಗ್ಲೂ ಜೆಲುಸಿಲ್ ಕೊಳ್ತಾ ಇದಾರೆ, ಹೊಟ್ಟೇ ಹುಣ್ಣಿಗೆ ಅಂತ ಸೇರಿಸಿದ. ನಾನು ಬೆಚ್ಚಿ ಸುಮ್ಮನಾದೆ. ನೀವು ಯಾವ ಮ್ಯಾಗಜೈನ್‌ನಲ್ಲಿ ಈ ಕತೆಗಳನ್ನ ಬರೆದಿರೋದು ಅಂದೆ. ಇನ್ನೂ ಯಾವ ಮ್ಯಾಗಜೈನ್‌ಗೂ ಕಳಿಸಿಲ್ಲ! ನನ್ನ ದಿವ್ಯ ವಾದ ಹಾಸ್ಯ ಪ್ರಜ್ಞೆಗೆ ಅನುರೂಪವಾದ ಮ್ಯಾಗಜೈನ್‌ಗೆ ಕಾಯತ್ತಾ ಇದೀನಿ ಅಂದ ಲಾರೆಲ್. ಸೋಮು ಹೇಳಿದ. ಅಲ್ಲ ಕಣೋ. ನಿನ್ ಹಾಸ್ಯಲೇಖನಗಳನ್ನ ಎಲ್ರೂ ಓದಿ ಸಂತೋಷ ಪಡ್ಲಿ! ಅಪರಂಜಿಗಾದ್ರೂ ಕಳಿಸು. ಲಾರೆಲ್ ಸಂಪ್ರೀತನಾದ. ಎರಡು ಲೇಖನ ಇಲ್ಲೇ ಇದೆ. ಸಂಪಾದಕರಿಗೆ ಕಳಿಸಿ! ಸಂಭಾವನೆ ಕಳಿಸೋದು ಮರೀಬೇಡಿ ಅಂತ ಹೇಳಿ ಅವರಿಗೆ, ಅಂತಾನೂ ಸೇರಿಸಿದ.

ಬೆಂಗಳೂರಿಗೆ ವಾಪಸ್ ಬರುವಾಗ ಅವನ 'ಲೇಖನ'ಗಳ ಮೇಲೆ ಕಣ್ಣಾಡಿಸಿದೆ. ಮೊದಲನೆಯದು ಒಂದು ಪದ್ಯ!

ರಾಜಕೀಯ

ಬನ್ನಿ, ಬನ್ನಿ ನಾವೆಲ್ಲ ಸೇರೋಣ
ರಾಜಕೀಯ !
ಬನ್ನಿ, ಭರಿಸೋಣ ಖಜಾನೆಯ
ಬನ್ನಿ ಹರಿಸೋಣ ಪವಾಡವ,
ಬೇಕೀದೇಶಕೆ ಶಾಂತಿ !
ಬೇಕೀದೇಶಕೆ ಕ್ರಾಂತಿ !
ನಿಮಗೇಕೆ ಇಂತು ಭ್ರಾಂತಿ ?

ಪುಟ ತಿರುಗಿಸಿದೆ ! ಒಂದು ಮಿನಿ ಲೇಖನ

ನಂಬಲರ್ಹ ಘಟನೆ

ಸಂಜೆ ತಂಪಾಗಿತ್ತು. ನಾನೂ, ನನ್ನ ಖಾಸಾ ಗೆಳೆಯ ರಾಜಾರಾಯನೂ ವಿಹಾರಾರ್ಥವಾಗಿ ಹೊರಟೆವು. ಪೋಲಿಸ್ ಸ್ಟೇಷನ್ ಬಳಿ ಬಂದೆವು. ಆಗ ಹರಾತ್ತನೆ ಒಬ್ಬ ಓಡಿಬಂದ. ಅವನ ಕೈಯಲ್ಲಿ ಒಂದು ಹ್ಯಾಂಡ್‌ಬ್ಯಾಗ್. ನಾನು ಆ ಲೇಡೀಸ್ ಹ್ಯಾಂಡ್‌ಬ್ಯಾಗ್ ನೋಡಿದ ತಕ್ಷಣ ಕೂಗಿದೆ

'ಕಳ್ಳ ! ಕಳ್ಳ !!

ರಾಜಾರಾಯ ದನಿಗೂಡಿಸಿದ.

'ಹಿಡೀರ್ರೋ, ಹಿಡೀರ್ರೋ !'

ನಮ್ಮ ಅದೃಷ್ಟಕ್ಕೆ ಅದೇ ಕ್ಷಣದಲ್ಲಿ ಪೋಲೀಸ್ ಅಧಿಕಾರಿಯೊಬ್ಬರು ಧಾವಿಸಿ ಬಂದು, ಹ್ಯಾಂಡ್‌ಬ್ಯಾಗ್ ಕಳ್ಳನನ್ನು ಹಿಡಿದರು. ಕಳ್ಳನ ಹಿಂದೆ, ಬ್ಯಾಗಿನ ಓನರ್, ಪಾಪ, ಓಡಿ ಬಂದಳು. 'ನಿಮ್ಮ ದಯೆಯಿಂದ ನನ್ನ ಬ್ಯಾಗ್ ಉಳೀತು' ಅಂತ ಧನ್ಯವಾದ ಹೇಳಿದಳು. ಅಧಿಕಾರಿ ಬಹಳ ನಮ್ರತೆಯಿಂದಲೂ, ಸೌಜನ್ಯದಿಂದಲೂ ನಡೆದು ಕೊಂಡರು. ಒಂದು ಒಳ್ಳೆಯ ಕಾರ್ಯ ಮಾಡಿದವೆಂದುಕೊಂಡು ಮನೆಗೆ ಹಿಂತಿರುಗಿದೆವು.

ಅಲ್ಲ, ಭೂತಕನ್ನಡಿ ಹಿಡಿದು ಕೊಂಡು ನೋಡಿದರೂ ಒಂದು ಮಾಲಿಕ್ಯೂಲಷ್ಟೂ ಹಾಸ್ಯ ಇಲ್ಲದೇ ಇರೋದನ್ನ ಅಪರಂಜಿ ಸಂಪಾದಕರಿಗೆ ಹೇಗೆ ಕಳಿಸಲಿ ? ಪೋಸ್ಟ್ ಮಾಡಿಬಿಡೋಣ ಅಂದು ಕೊಂಡೆ ಆದರೆ ಈ ಲೇಖನಗಳು ಕಸದ ಬುಟ್ಟಿ ತಲಪೋದರಲ್ಲಿ ಸಂಶಯವಿಲ್ಲ. ಸೋಮು ಬೇರೆ ಹೇಳಿದಾನೆ! ನೋಡೋ, ಹೇಗಾದರೂ ಮಾಡಿ ಇವನ ಲೇಖನಗಳನ್ನ ಅಪರಂಜೀಲಿ ಬರೋ ಹಾಗೆ ಮಾಡೋ ಅಂತ. ಲಾರೆಲ್ ಸ್ನೇಹಿತರು ಯಾಕೆ ಜೆಲು ಸಿಲ್ ತಗೋತಾರೆ ಅಂತ ಈಗ ಅರ್ಥವಾಯಿತು!

ಈ 'ಲೇಖನ'ಗಳನ್ನ ಅಪರಂಜೀಲಿ ಬರೋ ತರಹ ಮಾಡೋ ಮಾರ್ಗ ಇನ್ನೂ ಹುಡುಕ್ತಾ ಇದೀನಿ ! !

ಸೊಟ್ಟವೂ ಸೊಗಸು

ಶಾಂತ ರಘು

ಈ ತಿಂಗಳು ಏನಪ್ಪಾ ಬರೆಯೋದು ? ಯಾಕೋ ತಲೇನೇ ಓಡ್ತಾಯಿಲ್ಲ್ಲ. ಮುಷ್ಕರ ಮಾಡ್ತಾಯಿತ್ತು. ಹೋದ ತಿಂಗಳಂತೂ ವಿಪರೀತ ಗಲಾಟೆ. ಮನೇಲಿ ಮದುವೆ, ನೆಂಟರು, ಊಟಗಳ ಅವಾಂತರ, ಅಡಿಗೆ, ರೇಷನ್ನು, ನೆಂಟರು, ಮಕ್ಕಳು ಮದುವೆ...ಬೇಡಪ್ಪಾ...ಸಧ್ಯಕ್ಕೆ ಈ ಸಬ್ಜೆಕ್ಟ್ಸ್ ಯಾವುದೂ ಬೇಡ. ಈಗಾಗ್ಗ್ಲೇ ಮಹಿಳೆಯರು ಬರೆಯೋದನ್ನ 'ಉಪ್ಪಿಟ್ಟು ಸಾಹಿತ್ಯಾಂ'ತ ತಮಾಷೆ ಬೇರೆ ಮಾಡ್ತಾಯಿದಾರೆ! ಏನ್ಮಾಡೋದು ? ಪೆನ್ನಿಂದ ತಲೆ ಕೆರ್ಕ್ಕೋತಾ ಇದ್ದೆ.

ವೀಡಿಯೋಲಿ "ಮಿಸ್ ವರ್ಲ್ಡ್" ಸ್ಪರ್ಧೆ ಹಾಕಿದ್ರು. ಓಹೋ ! ಲಲನಾ ಮಣಿಯರ ಹಿಂಡು ಹಿಂಡೇ ! ದಂಡು ದಂಡೇ ! ಬಿಕಿನಿಧಾರಿಣಿಯರ ಬೆಡಗು, ಬಿನ್ನಾಣ ! ಚಿತ್ರ ವಿಚಿತ್ರ ಡ್ರೆಸ್ಸು ಧರಿಸಿ, ಒನಪು, ಒಯ್ಯಾರ! ವಿಶ್ವಸುಂದರಿ ಮಿಸ್ ರಷ್ಯ ಧಾರಾಳವಾಗಿ ಬೆಳೆದಿದ್ಲು. ಗೆದ್ದು ಬೀಗ್ತಾಯಿದ್ಲು.

ಯಾಕೋ ಈ ಸಮಾರಂಭಗಳೆಲ್ಲಾ ತುಂಬಾ ಬೋರಾಗ್ತಾಯಿವೆ ಅಲ್ವೆ ? ಎಲ್ಲಾ ಒಂದೇ ಥರಾ – ಒಂದೇ ಪಡಿಯಚ್ಚು.

ಸಿನಿಮಾ ಪ್ರಪಂಚದಲ್ಲಿ ಫಿಲಂ ಫೇರ್, ಸಂಡೇ ಅಬ್ಸರ್ವರ್, ಚಿತ್ರಪ್ರಭ ಪ್ರಶಸ್ತಿಗಳು, ಗ್ರ್ಯಾಮಿ, ಆಸ್ಕರ್ ಅವಾರ್ಡ್‌ಗಳು–ಕ್ರಿಕೆಟ್‌ನಲ್ಲಿ ಮೊನ್ನೆ ನಡೆದ ಚಾರ್‌ಮಿನಾರ್ ಟ್ರೋಫಿ – ಎಲ್ಲಾ ಒಂದೇ ಥರಾ.

ಫಿಲಂ ಫೇರ್, ಅವಾರ್ಡ್ ಅನ್ನೇ ತೊಗೊಳ್ಳಿ.

"ಮಹನೀಯರೆ, ಮಹಿಳೆಯರೆ ! ಈ ವರ್ಷದ ಅತ್ಯುತ್ತಮ ನಟಿಗೆ ಪ್ರಶಸ್ತಿ ನೀಡಲು ಶ್ರೀ 'ಯಾವುದೋ' ಕುಮಾರರನ್ನು ಆಹ್ವಾನಿಸುತ್ತಿದ್ದೇವೆ."

ಆ ಯಾವುದೋ ಕುಮಾರ ಸ್ಟೇಜ್ ಮೇಲೆ ಬರೋದು. ಕವರ್ ಬಿಚ್ಚೋದು ಪರಮಾಶ್ಚರ್ಯ ಪಡೋದು. "ಓ! ಈ ವರ್ಷದ ಅತ್ಯುತ್ತಮ ನಟಿ ಮಿಸ್, ಜಗಿನಾಶ್ರೀ !"

ಜಗಿನಾಶ್ರೀಯ ಉದ್ವೇಗಪೂರ್ಣ ಉದ್ಗಾರಗಳು ! "ಓಹ್ ! ನಂಗೇನೂ ಹೇಳೋಕೆ ತೋಚ್ತಾಯಿಲ್ಲ ! ಇದೇನು ಕನಸೆ ? ಇದೇ ನನ್ನ ಭಾಗ್ಯದ ದಿನ ! ನಾನು ಈ ಸ್ಥಿತಿ ತಲುಪಲು ಕಾರಣರಾದ ಈ ಎಲ್ರಿಗೂ ಥ್ಯಾಂಕ್ಸ್ ಹೇಳಲು

ಬಯಸುತ್ತೇನೆ. ನನ್ನ ಪ್ರೊಡ್ಯೂಸರ್ ಛಟ್ ಪಟ್ ಲಾಲ್. ನನ್ನ ಏಜಂಟು, ಸಹನಟರು, ಕ್ಯಾಮೆರಾಮ್ಯಾನ್, ಸ್ಟೂಡಿಯೋ ಕಸಗುಡಿಸೋನು, ನನ್ನ ಡ್ರೈವರ್, ಅಡಿಗೆಯುವಳು, ನಮ್ಮ ಫ್ಯಾಮಿಲಿ ಡಾಕ್ಟರು, ನನ್ನ ನಾಯಿ, ನಮ್ಮಪ್ಪ, ಅಮ್ಮ

ಅಲ್ಲಾ ! ಪ್ರತಿ ವರ್ಷ ಇದೇ ನಮೂನೆ ಸಮಾರಂಭಗಳನ್ನೇ ಯಾಕೆ ಮಾಡ್ಬೇಕು ? ಯಾಕೆ ಅತ್ಯುತ್ತಮವಾಗಿರೋರಿಗೇ ಪ್ರಶಸ್ತಿಗಳನ್ನ ಕೊಡ್ಬೇಕು ? ಫಾರ್ ಎ ಚೇಂಜ್ ಅತ್ಯಂತ ಕೆಟ್ಟದಾಗಿ ಮಾಡೋರಿಗೂ ಯಾಕೆ ಸನ್ಮಾನ ಮಾಡ್ಬಾರ್ದು ಅಂತೀನಿ ?

ಉದಾಹರಣೆಗೆ ಚಿತ್ರಪ್ರಭಾ ಪ್ರಶಸ್ತಿಗಳನ್ನ ಹೀಗೆ ಕೊಡಬಹುದು· "ಮಹನೀಯರೆ ! ಮಹಿಳೆಯರೆ ! ಈ ವರ್ಷದ ಅತಿ ಕೆಟ್ಟ ನಟನೆಗೆ ಮೂವರು ಹೀರೋಗಳಲ್ಲಿ ಭಯಂಕರ ಪೈಪೋಟಿ. "ಸಿಡಿಮಿಡಿ ಗುಂಡ' ಚಿತ್ರದ ನಾಯಕ ಪಿಂಕೂರಾಜಾ, 'ಈಡಿಯಟ್ ನನ್ಮಗ' ಚಿತ್ರದ ಹೀರೋ ಅಧಮ ಕುಮಾರ್, 'ದಗಲ್ ಬಾಜಿ ಧಡಿಯ' ಚಿತ್ರದ ಚಾಲಾಕ್ ಕುಮಾರ್ ! 'ಈಡಿಯಟ್ ನನ್ಮಗ' ಚಿತ್ರದ ಅಧಮ ಕುಮಾರ್ ಈ ವರ್ಷದ ಅತೀ ಕೆಟ್ಟ ನಟನ ಪ್ರಶಸ್ತಿಯನ್ನು ಕೂದಲೆಳೆಯಲ್ಲಿ ಗೆದ್ದಿದ್ದಾರೆ !"

"ಕೆಟ್ಟ ನಟನಾಗಿ ಈ ಪ್ರಶಸ್ತಿ ಸ್ವೀಕರಿಸಲು ನನಗೆ ಹೆಮ್ಮೆಯೇ. 'ಈಡಿಯಟ್ ನನ್ಮಗ' ಚಿತ್ರ ಮಾಡಿದ್ದಕ್ಕೆ ನಂಗೇನೂ ದುಃಖವಿಲ್ಲ. ದುಡ್ಡಿಗೋಸ್ಕರ ಮಾಡ್ದೆ ಮುಂದೇನೂ ಈ ತರ ಈಡಿಯಾಟಿಕ್ ಚಿತ್ರಗಳಲ್ಲಿ ಮಾಡೇ ಮಾಡ್ತೀನಿ – ದುಡ್ಡು ಕೊಟ್ರೆ. ಈ ವರ್ಷದ ಅತ್ಯುತ್ತಮ ನಟ ಮನ್ಮಥ ಕುಮಾರ್ ಮಾಡ್ದ "ಮುಕುಂದ ಮೂಲಂಗಿ ತಿಂದ' ಚಿತ್ರ ನೋಡ್ದೆ, ವಾಕರಿಕೆ ಬಂತು, ಅತಿ ಕೆಟ್ಟ ಅಭಿನಯ ಮಾಡ್ಬಿಟ್ಟು, ಅದಕ್ಕೆ ಅತ್ಯುತ್ತಮ ನಟನ ಪ್ರಶಸ್ತಿ ಪಡೆಯೋಕಿಂತ, ಕೆಟ್ಟ ನಟನೆಗೆ, ಕೆಟ್ಟ ನಟನ ಪ್ರಶಸ್ತಿ ರಾಜಾರೋಷವಾಗಿ ಹೊಡಕೊಂಡು ಹೋಗೋದೇ ನ್ಯಾಯ! ನಾನೇ ವಾಸಿ – ಅಲ್ವೆ ! ?"

"ಈ ವರ್ಷದ ಅತಿ ಕೆಟ್ಟ ನಟಿಯ ಪ್ರಶಸ್ತಿಗೂ ಮೂವರಲ್ಲಿ ನೆಕ್ ಟು ನೆಕ್ ರೇಸ್ ! 'ಕೊಂಬೆ ಮೇಲೆ ರಂಭೆ' ಚಿತ್ರದ ಜಿಲ್ ಜಿಲ್ ಕುಮಾರಿ, 'ಬಿಂಕದ ಸಿಂಗಾರಿ' ಚಿತ್ರದ ನಾಯಕಿ ತ್ರಿಪುರ ಸುಂದರಿ, ಹಾಗೂ 'ಮುಂಗೈಯಲ್ಲಿ ಮೂದೇವಿ' ಚಿತ್ರದ ಗುಲಾಬಿ ಈ ರೇಸ್‌ನಲ್ಲಿ ಗೆದ್ದು ಅತೀ ಕೆಟ್ಟ ನಟಿಯ ಪ್ರಶಸ್ತಿಯನ್ನು ಹಾರಿಸಿಕೊಂಡು ಹೋದವರು – 'ಕೊಂಬೆ ಮೇಲೆ ರಂಭೆ' ಚಿತ್ರದ ನಾಯಕಿ ಜಿಲ್ ಜಿಲ್ ಕುಮಾರಿ!"

ನಿಲ್ಲದ ಭರ್ಜರಿ ಚಪ್ಪಾಳೆ, "ಥ್ಯಾಂಕ್ಯೂ ವೆರಿಮಚ್ ! ನಾನು ಈ ಮರವಸ್ಥೆಗೆ ಬರಲು ಕಾರಣರಾದೋರು ಹಲವಾರು ಮಂದಿ. ಅವರನ್ನೆಲ್ಲಾ ಈ ಸಂದರ್ಭದಲ್ಲಿ

ಜ್ಞಾಪಿಸಿಕೊಳ್ಳೋ ಹೋದ್ರೆ ಆಗುತ್ತೆ? ಮೊದಲನೆಯದಾಗಿ 'ಕೊಂಬೆ ಮೇಲೆ ರಂಭೆ' ಅಂಥಾ ಥರ್ಡ್ ರೇಟ್ ಕಳಪೆ ಕತೇನ ಚಿತ್ರ ಮಾಡಿದಾರಲ್ಲಾ, ನಮ್ಮ ಪ್ರೊಡ್ಯೂಸರ್ ಅವರ ತಲೇನ ಮೊದ್ಲು ಪರೀಕ್ಷೆ ಮಾಡಿಸ್ಬೇಕು. ಎರಡನೆಯದಾಗಿ, ಈ ಚಿತ್ರದ ಛಾಯಾಗ್ರಾಹಕ ಮೊದ್ಲು ಬಾಕ್ಸ್ ಕ್ಯಾಮೆರಾದಲ್ಲಿ ಫೋಟೋ ತೆಗೆದು ಅಭ್ಯಾಸ ಮಾಡಿ ಕೊಳ್ಳಲಿ. ಕೆಟ್ಟ ಕೆಟ್ಟ ಆಂಗಲ್‌ಗಳಲ್ಲಿ ನನ್ನನ್ನ ಚಿತ್ರೀಕರಿಸಿ ನನ್ನ ಇಮೇಜನ್ನೇ ಹಾಳು ಮಾಡ್ದ ಕ್ಯಾಮರಾಮ್ಯಾನ್ ಮೇಲೆ, ಮತ್ತು ತನಗೆ ಡೈರೆಕ್ಷನ್ ಬರತ್ತೋ ಇಲ್ವೋಂತ ನನ್ನ ಮೇಲೆ ಪ್ರಯೋಗ ಮಾಡಿದ ಡೈರೆಕ್ಟರ್ ಮೇಲೆ ಕೇಸ್ ಹಾಕಿದ್ದೀನಿ"

"ಥ್ಯಾಂಕ್ಯೂ ಮಿಸ್, ಜಿಲ್ ಜಿಲ್ ಕುಮಾರಿ! ಇನ್ನು ಈ ವರ್ಷದ ಅತ್ಯಂತ ಕಳಪೆ ಚಿತ್ರದ ಪ್ರಶಸ್ತಿಗೆ ಮೂರು ಫೈನಲಿಸ್ಟುಗಳು. 'ಮಡೆಯ ನಮ್ಮ ಒಡೆಯ" "ಸಂಸಾರ ಅಯ್ಯೋ ಗ್ರಹಚಾರ" ಹಾಗೂ, "ಹೆಂಡತೀ ಪ್ರಾಣ ಹಿಂಡುತೀ" ಈ ಮೂರು ಚಿತ್ರಗಳಲ್ಲಿ, ಕೋಣನ ಕುಂಟೆ ಟೆಂಟಿನಲ್ಲಿ ಒಂದೇ ಷೋ ಓಡಿ, ರೆಕಾರ್ಡ್ ಮಾಡಿದ, 'ಮಡೆಯ ನಮ್ಮ ಒಡೆಯ' ಚಿತ್ರಕ್ಕೇ ಫಸ್ಟ್ ಪ್ರೈಸು. ಈ ಚಿತ್ರದ ಪ್ರೊಡ್ಯೂಸರು, ಮಲ್ ಮಲ್ ಸಿಂಗ್, ದಿವಾಳಿಯಾಗಿ, ಸಾಲಗಾರರ ಕಾಟ ತಡೆಯ ಲಾಗದೆ ತಲೆ ಮರೆಸಿಕೊಂಡಿರೋದ್ರಿಂದ, ಅವರ ಅಳಿಯ ಮಖಮಲ್‌ಸಿಂಗ್' ಮಾವನ ಪರವಾಗಿ ಈ ಪ್ರಶಸ್ತಿಯನ್ನು ಸ್ವೀಕರಿಸುವರು"

"ಅತಿ ಕೆಟ್ಟ ಸಂಗೀತ ನಿರ್ದೇಶನಕ್ಕೆ ಎರಡು ನಾಮಿನೇಷನ್ಸ್. 'ಖಾದಿ ಹೊದ್ದ – ಬೀದೀಗೆ ಬಿದ್ದ' ಹಾಗೂ 'ಬೀದಿ ಕಾಮಣ್ಣ' ಪ್ರಶಸ್ತಿ ಗಳಿಸಿರೋದು' 'ಬೀದಿ ಕಾಮಣ್ಣ' ಚಿತ್ರದ ಸಂಗೀತ ನಿರ್ದೇಶಕ, ಮುಖಾರಿ ಮಾದೇವಪ್ಪ. ಪಡವಾರ ಹಳ್ಳಿಯ ಸಮಾರಂಭ ಒಂದರಲ್ಲಿ ಈ ಚಿತ್ರದ ಟೈಟಲ್ ಸಾಂಗ್ ಹಾಕಿದಾಗ, ಆ ಏರಿಯಾದ ಕತ್ತೆಗಳೆಲ್ಲಾ ಅಲ್ಲಿಗೆ ಧಾವಿಸಿ, ಒಟ್ಟಾಗಿ ಗ್ರೂಪ್ ಸಾಂಗ್ ಶುರುಮಾಡಿದ್ದರಿಂದ, ಪಡವಾರಳ್ಳಿ ಜನ ಪೂರ್ತಿ ಮುಖಾರಿ ಮಾದೇವಪ್ಪನೋರ್ಗೇ ಕೆಟ್ಟ ಓಟು ಕೊಟ್ಟಿದಾರೆ"

"ಅತಿ ಕೆಟ್ಟ ಹಿನ್ನಲೆ ಗಾಯಕನ ಪ್ರಶಸ್ತಿ 'ಗಾರ್ಧಬ ಗಾನ ವಿಶಾರದ' ಬಿರುದು – ನಿಸ್ಸಂದೇಹವಾಗಿ ಈ ವರ್ಷ ಶ್ರೀ ಮಧುರವಾಣಿ ಅವರಿಗೇ! ಯಾವ ಊರ್‍ನಲ್ಲಿ ಇವರು ಸ್ಟೇಜ್ ಮೇಲೆ ಹಾಡೋ ಸಾಹಸ ಮಾಡಿದ್ರೂ – ಪ್ರೇಕ್ಷಕರು ತೂರಿದ ಕೊಳೆತ ಟೊಮೋಟೊ, ಮೊಟ್ಟೆ, ಮೆಟ್ಟುಗಳನ್ನ ಸಾಗಿಸೋಕೆ ಮುನಿಸಿ ಪಾಲ್ಟಿ ಲಾರಿಗಳೇ ಬರಬೇಕಾಯ್ತು. 'ಬೀದಿ ಕಾಮಣ್ಣ' ಚಿತ್ರದಲ್ಲಿ ಇವರು ಹಾಡಿದ "ಓ ನನ್ನ ನೀರೇ, ಅಬ್ಬಾ ನಿನ್ನ ಜೋರೇ, ನಿನಗೆ ಸಾಟಿಯಾರೇ, ನೀನಿಲ್ಲದೆ ಬೋರೇ,

ಬೇಗ ಬೇಗ ಬಾರೇ" ಹಾಡನ್ನು ಕೇಳಿದ ಕೂಡ್ಲೇ ಸುಮಾರು ಕೂಸುಗಳು ಬೆಚ್ಚಿ, ಕೆಟ್ಟದಾಗಿ ಕಿಟ್ಟನೆ ಕಿರುಚಿ, ಫಿಟ್ಸ್ ಬಂದು, ನೆಟ್ಟಗೆ ಆಸ್ಪತ್ರೆಗೇ ಹೋಗಬೇಕಾದ ವರದಿಗಳು, ನಮಗೆ ಬಂದು ತಲಪಿವೆ. ಸೋ.. ಶ್ರೀ ಮಧುರವಾಣಿ...

ಕ್ರಿಕೆಟ್‌ನಲ್ಲಿ ಯಾವಾಗಲೂ ಅತಿ ಹೆಚ್ಚು ರನ್ಸ್ ಹೊಡೆದವರಿಗೂ, ಅತಿ ಹೆಚ್ಚು ವಿಕೆಟ್ಸ್ ತೊಗೊಂಡವರಿಗೂ ಮಾತ್ರ ಯಾಕೆ 'ಪಂದ್ಯ ಶ್ರೇಷ್ಠ' ಪ್ರಶಸ್ತಿ ಕೊಡ್ಬೇಕು ?

"ಮ್ಯಾಚಿನ ಎರಡು ಇನ್ನಿಂಗ್ಸ್‌ನಲ್ಲೂ ಯಶಸ್ವಿಯಾಗಿ ಡಕ್ ಹೊಡೆದು, – ಫೀಲ್ಡ್ ಮಾಡೋವಾಗ ಐದು ಕ್ಯಾಚ್ ಬಿಟ್ಟಿದ್ದಲ್ದೆ, ಎದುರಾಳಿ ಬೀಸಿ ಹೊಡೆದ ಬಾಲನ್ನು, ತಾನೇ ಅಡ್ಡಾ ದಿಡ್ಡಿ ಓಡಿ, ತಳ್ಳಿ, ಒದ್ದು, ಮೂರುಸಲ ಬೌಂಡರಿಗೆ ಅಟ್ಟಿದ, ಆಲ್ ರೌಂಡರ್ ಬಿಪಿನ್ ಬಂಡಲ್‌ಕರ್ – ಈ ಮ್ಯಾಚಿನ ಅತಿ ಕೆಟ್ಟ ಆಟಗಾರನ ಪ್ರಶಸ್ತಿ ಗೆದ್ದು ಕೊಂಡಿದ್ದಾರೆ. ಗಿವ್ ಹಿಮ್ ಎ ಬಿಗ್ ಹ್ಯಾಂಡ್!"

ಎದುರಾಳಿಗಳ ಅನಂತ ಕೃತಜ್ಞತೆಗೆ ಪಾತ್ರರಾದ ಬಂಡಲ್‌ಕರ್ ಅಂತಹವರು ಮಾತ್ರ ಯಾಕೆ ಬರಿಗೈ ಬೀಸ್ಕೊಂಡು ಮನೇಗೆ ಹೋಗ್ಬೇಕು ? ಬೆಸ್ಟ್ ಪ್ರೈಜ್ ಬರ್ದೇ ಇದ್ರೆ ಏನಂತೆ ? ಯಾವುದೋ ಒಂದು ! ಬರಿಗೈಗಿಂತ ಹಿತ್ತಾಳೆ ಕಡಗ ಲೇಸು !

ಅಮೆರಿಕದಲ್ಲಿ ಎಲ್ಲೋ ಸೌಂದರ್ಯ ಸ್ಪರ್ಧೆಗಳ ತರಹ, ಕುರೂಪ ಸ್ಪರ್ಧೆಗಳನ್ನ ನಡೆಸಿ, ಅತ್ಯಂತ ಕುರೂಪಿಗೆ ಪ್ರೈಸ್ ಕೊಡ್ತಾರಂತೆ !

ಹೇಳಿದ್ದೇ ಹೇಳಿ, ಕೇಳಿದ್ದೇ ಕೇಳಿ, ಮಾಡಿದ್ದೇ ಮಾಡಿ, ನೋಡಿದ್ದೇ ಯಾಕೆ ನೋಡ್ಬೇಕು ? ಸ್ವಲ್ಪ ಆಫ್ ಟ್ರ್ಯಾಕ್ ಹೋದ್ರೆ ತಪ್ಪೇನು? ಯಾವಾಗ್ಲೂ ನೆಟ್ಟಗೇ ಯಾಕೆ ಹೋಗ್ಬೇಕು ? ಕೆಲವು ಸಲ ಸೊಟ್ಟವೂ ಸೊಗಸು ! !

ಇವಳೇನು ಕಡಿಮೆ ?

ದ್ರೌಪದಿಗೆ
ಪಂಚಪದಿ
ಯಾದರೆ
ಭಾಮಿನಿಗೆ
ಷಟ್‌ಪದಿ

ಎಸ್. ಪ್ರಕಾಶ್

ಕೂಗು ಮಾರಿ

–ನಂದಿನಿ ಕಾಪಡಿ

ನೀವೇನಾದರೂ ಸಾವಿರದ ಒಂಭೈನೂರ ಅರವತ್ತನೇ ಇಸವಿಯ ಒಳಗೆ ಹುಟ್ಟಿದ್ದರೆ ನಿಮಗೆ ಗೊತ್ತೇ ಆಗಿಬಿಡುತ್ತದೆ! 'ಕೂಗು–ಮಾರಿ'ಯ ಪ್ರಭಾವಕ್ಕೆ ಒಳಗಾಗದ ಮಕ್ಕಳೇ ಆಗಿರಲಿಲ್ಲ! ಈ ಪುರಾಣ ಓದೋ ಮೊದಲಿಗೆ 'ಕೂಗು–ಮಾರಿ' ಎಂದರೇನು ಎಂದು ತಲೆ ತುರಿಸಿಕೊಳ್ಳಬೇಡಿ. ಪಿಶಾಚಿ, ದೆವ್ವ, ಭೂತ ಪ್ರೇತಗಳೆಂದು ವಿಂಗಡಿಸಲ್ಪಡುವ, ಅಮಾನುಷ ಶಕ್ತಿಗಳೆಂದು ಕರೆಸಿಕೊಳ್ಳುವ ಈ ಒಂದು ಜಾತಿಯ ಕಲ್ಪನೆಗೆ 'ಕೂಗು–ಮಾರಿ'ಯೆಂದು ಹೆಸರು.

ನಾನು ಆಗ ಆರನೆಯ ತರಗತಿಯಲ್ಲಿದ್ದೆ. ಗಣಿತದಲ್ಲಿ ನಮ್ಮ ಟೀಚರ್ 'ಸರಾಸರಿ' ಹೇಳಿಕೊಡುತ್ತಿದ್ದರು. ಸಾಪ್ರೊಂದಿಷ್ಟು ಜನ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾಗ ಕ್ಲಾಸಿನ ಎಡ ಮೂಲೆಯಿಂದ ಗುಸುಗುಸು, ಪಿಸುಪಿಸು ಮಾತು ಶುರುವಾಯ್ತು. ನಮ್ಮ ಟೀಚರೋ ಮೊದಲೇ ಚಂಡಿಕೆಯ ಅವತಾರ. (ಹಾಗೆ ಹೇಳಲು ನನಗೆ ಈಗ ಸ್ವಲ್ಪ ಧೈರ್ಯ ಬಂದಿದೆ!) "ಸದ್ದು" ಎಂದು ಹೇಳುತ್ತಾ ಅವರು ಒಮ್ಮೆ ರೂಲರು ದೊಣ್ಣೆಯನ್ನು ಮೇಜಿಗೆ ಬಾರಿಸಿದರೆ ನಮ್ಮಗಳ ಜಂಘಾ ಬಲವೇ ಉಡುಗಿ ಹೋಗುತ್ತಿತ್ತು! ಆದರೆ ಇವತ್ತಿನ ಪರಿಸ್ಥಿತಿ ಸ್ವಲ್ಪ ಗಂಭೀರ ವಾಗಿತ್ತು! ನಮ್ಮ ಪ್ರಾಣೇಶ ಟೀಚರಿನ ದೊಣ್ಣೆಗೆ ಹೆದರದೆ "ನಾವು ಕೂಗು-ಮಾರಿಯ ವಿಷಯ ಮಾತಾಡಿಕೋತಿದ್ವಿ ಟೀಚರ್ ಆಲದ ಮರದ ಕೆಳಗೆ ಎರಡು ದಿನದ ಹಿಂದೆ ಕೂಗು ಮಾರಿ ಒಬ್ಬ ಮನುಷ್ಯನನ್ನು ಹಿಡಿದು ಕೊಂಡಿತಂತೆ. "ಎಂದು ಹೇಳಿಯೇ ಬಿಟ್ಟ. ನಮ್ಮ ಟೀಚರಿಗೆ ಪಿತ್ತ ನೆತ್ತಿಗೇರಿ, "ಮೂಢ ನಂಬಿಕೆಗಳು, ನಿಮಗೆ ವಿಜ್ಞಾನ ಹೇಳಿಕೊಟ್ಟು ನನ್ನ ಜನ್ಮ ಸಾರ್ಥಕವಾಯ್ತು" ಎಂದು ತಲೆ ಚಚ್ಚಿಕೊಳ್ಳುತ್ತಾ ಪ್ರಾಣೇಶನನ್ನು ಕ್ಲಾಸಿನ ಆಚೆ ಕಳಿಸಿಬಿಟ್ಟರು.

ಆದರೆ ಕೂಗು ಮಾರಿಯ ಪ್ರಕರಣ ಅಲ್ಲಿಗೆ ನಿಲ್ಲಲಿಲ್ಲ. ಸತ್ಯಪ್ರಕಾಶ್ ನನ್ನನ್ನು ಕರೆದು "ಕೂಗು ಮಾರಿ ರಾತ್ರಿ ಮನೆಯ ಹೊರಗೆ ಬಂದು ಮೂರು ಸಲ ಹೆಸರು ಹಿಡಿದು ಕೂಗುತ್ತಂತೆ. ನಾವೇನಾದರೂ ಓ ಎಂದು ಬಿಟ್ಟರೆ ನಮ್ಮ ಕತ್ತನ್ನು ಹಿಚಿಕಿಹಾಕಿ ಬಿಡುತ್ತಂತೆ" ಎಂದರೆ ನನ್ನ ಗೆಳತಿ ಭಾಗ್ಯಶ್ರೀ ಒಂದೊಂದು ಸಲ ಅದು ಎರಡೇ ಸಾರಿ ಹೆಸರನ್ನು ಹಿಡಿದು ಕೂಗುತ್ತಂತೆ. ಆಗೇನಾದರೂ ಬಾಗಿಲು ತೆರೆದು ಬಿಟ್ಟರೆ ಕೂಗುಮಾರಿ ಮುಖ ತಿರುಗಿಸಿಕೊಂಡುಬಿಟ್ಟು ವಾಪಸು ಹೋಗುತ್ತಂತೆ" ಎಂದಳು.

ಕ್ಲಾಸು ಮುಗಿಯುವ ಹೊತ್ತಿಗೆ ಯಶವಂತಪುರದಲ್ಲಿ ಕೂಗುಮಾರಿ, ಕೆಂಪಯ್ಯ ಎಂಬ ಮನುಷ್ಯನನ್ನು ಹಿಡಿದದ್ದು ಅವನು "ರಾಮ ರಾಮ" ಎಂದ ತಕ್ಷಣ ಬಿಟ್ಟದ್ದು, ಮಲ್ಲೇಶ್ವರಂ ಸರ್ಕಲಿನಲ್ಲಿ ಗೋಪಿ ಎನ್ನುವ ಹುಡುಗನನ್ನು ಕೂಗುಮಾರಿ ಕೂಗಿದ್ದು, ಅವನು ಓಗೊಡದೆ ಓಡಿಹೋದದ್ದು, ಶೇಷಾದ್ರಿಪುರಂನಲ್ಲಿ ಸೀತಾ ಎಂಬ ಹುಡುಗಿಯನ್ನು ಕೂಗುಮಾರಿ ಕರೆದದ್ದು ಎಲ್ಲವೂ ಸ್ಕೂಲಿನ ತುಂಬೆಲ್ಲಾ ಹರಡಿಬಿಟ್ಟವು

ಅವತ್ತು ರಾತ್ರಿ ನನಗೆ ಸರಿಯಾಗಿ ನಿದ್ರೆ ಬರದೇ "ಕೂಗುಮಾರಿ" ಎಂದು ಒಂದೆರಡು ಸಲ ಕೂಗಿಕೊಂಡದ್ದು ಕೇಳಿ ನಮ್ಮಮ್ಮ ಹೆದರಿಕೊಂಡು ದೇವರ ರಕ್ಷೆ ಹಣೆಗಿಟ್ಟಿದ್ದದ್ದು ಜ್ಞಾಪಕವಿದೆ. ನಮ್ಮಜ್ಜಿ "ಛಿ, ಬಿಡು, ಅಪ್ಪು. ರಾಮಜಯಂ ಅಂದುಬಿಟ್ಟರೆ ಯಾವ ಕೂಗು ಮಾರಿಯೂ ಬರುವುದಿಲ್ಲ" ಎಂದು ನನಗೆ ಆಶ್ವಾಸನೆ ಕೊಟ್ಟದ್ದು ಈಗಲೂ ಚೆನ್ನಾಗಿ ನೆನಪಿದೆ.

ಮಾರನೆಯ ದಿನ ಶಾಲೆಯಲ್ಲಿ ಕೂಗುಮಾರಿಯ ಪರಿಹಾರಗಳು ಹೊರಗೆ ಬಂದವು. ಮನೆಯ ಹೊರಗಡೆಗೆ ಮೂರು ನಾಮ ಬಳಿಯುವುದು, "ಹೋಗಿ ಬಾ" ಎಂದು ಬರೆಯುವುದು ಇಲ್ಲದಿದ್ದರೆ "ಶ್ರೀ ರಾಮ ಜಯಂ" ಎಂದು ಜಪಿಸುವುದು ಮುಂತಾದವುಗಳು ಸೂಚಿಸಲ್ಪಟ್ಟವು. ತಮಾಷೆಯೆಂದರೆ ನಮ್ಮ ಬಡಾವಣೆಯ ಮನೆಗಳ ಗೋಡೆಗಳ ಮೇಲೆಲ್ಲಾ ಈ ಮೇಲಿನ ಪರಿಹಾರಗಳು ಕಂಡು ಬಂದು, "ಕೂಗು–ಮಾರಿಯ" ಭೀತಿ ಅಧಿಕವಾಯಿತು.

ಆಗ ತಾನೇ ವಿದೇಶದಿಂದ ಮರಳಿದ್ದ ನಮ್ಮ ಪ್ರಿನ್ಸಿಪಾಲರು ಬೆಳಗಿನ ಪ್ರಾರ್ಥನೆಯ ನಂತರ ಪ್ರತಿದಿನವೂ "ಕೂಗು ಮಾರಿಯೆಂಬ ಅಂಧ ವಿಶ್ವಾಸ ಮುಂತಾದುವನ್ನು ತೊರೆಯಬೇಕೆಂದು ಹೇಳತೊಡಗಿದರು. ಏನೂ ಪ್ರಯೋಜನವಾಗಲಿಲ್ಲ. ನಾನಂತೂ ಆಲದ ಮರದ ಮುಂದಿನ ರಸ್ತೆಯಲ್ಲಿ ಒಬ್ಬಳೇ ಹೋಗುವುದೇ ಬಿಟ್ಟೆ. ಒಮ್ಮೆ ನಮ್ಮ ತಂದೆ ಮಲ್ಲೇಶ್ವರ ಒಂಬತ್ತನೇ ಕ್ರಾಸಿನ ಗಣಪತಿ ಗುಡಿಗೆ ಕರೆದೊಯ್ಯುತ್ತಿದ್ದಾಗ ನಾನು ಆಲದ ಮರ ಬಂದ ತಕ್ಷಣ ಥರ ಥರ ನಡುಗುತಾ ಶ್ರೀ ರಾಮ ಜಯಂ ಎಂದು ಬಡಬಡಿಸಿದ್ದನ್ನು ನೋಡಿ ನಮ್ಮ ತಂದೆ ಆಲದ ಮರದ ಕೆಳಗೇ ನನ್ನನ್ನು ನಿಲ್ಲಿಸಿ ನೋಡು ಇದೊಂದು ದೊಡ್ಡಮರ. ಇದರ ಮೇಲೆ ಪಕ್ಷಿಗಳಿವೆಯೇ ಹೊರತು ಕೂಗು ಮಾರಿಯೂ ಇಲ್ಲ, ಎಂಥದ್ದೂ ಇಲ್ಲ" ಎಂದರು. ನನಗೆ ಗಣಪತಿ ಗುಡಿಗೆ ಬರುವ ತನಕ ಜೀವವಿರಲಿಲ್ಲ ಎನಿಸಿತು.

ಇಷ್ಟೆಲ್ಲಾ ಹಗರಣ ಮಾಡಿದ ಕೂಗುಮಾರಿ ಊರುಬಿಟ್ಟು ಹೋದದ್ದು ಯಾವಾಗ ಎಂದು ಸರಿಯಾಗಿ ಯಾರಿಗೂ ಗೊತ್ತಾಗಲಿಲ್ಲ. ಬಂದ ಹಾಗೇ ಇದ್ದ

ಕ್ಯಿದ್ದಂತೆ ಪಾಯವೂ ಆಯಿತು. ನಮ್ಮ ಪ್ರಾಣೇಶನೇ ಶಿವರಾಮ ಕೃಷ್ಣನ ಹತ್ತಿರ "ಕೂಗು–ಮಾರಿ" ತುಮಕೂರಿಗೆ ಹೋಯಿತಂತೆ ಕಣೋ" ಎಂದು ಜೋರಾಗಿ ಬಿತ್ತರಿಸಿದ ಮೇಲೆ ನಮ್ಮ ಕ್ಲಾಸಿನಲ್ಲಿ ಒಂದು ತರಹಾ ನಿರಾತಂಕವಾಯಿತು.

ಹೋದ ತಿಂಗಳು ಬೆಂಗಳೂರಿಗೆ ಹೋದಾಗ ಗಣಪತಿಯ ಗುಡಿಗೆ ಹೋಗು ವಾಗ ಆಲದ ಮರದ ಮುಂದಿನಿಂದ ಹೋಗುತ್ತಿದ್ದೆ. ಅರೆ! ನಮ್ಮ ಆಲದ ಮರ ಎಲ್ಲಿ? ಸುಂಟರಗಾಳಿಯಲ್ಲಿ ರೆಂಬೆಗಳು ನಷ್ಟವಾದ ಮೇಲೆ ಮುನಿಸಿಪಾಲಿಟಿಯವರು ಆಲದ ಮರವನ್ನು ಸುಮಾರಾಗಿ ಪೂರ್ತಿಯೇ ಕಡಿದುಬಿಟ್ಟಿದ್ದಾರೆ! ಎಂತಹ ಭವ್ಯ ವೃಕ್ಷವೆಲ್ಲಿ? ಈ ಬಡಪಾಯಿ ಬೊಡ್ಡೆಯೆಲ್ಲಿ?

ಆಲದ ಮರ ಕಡಿದಿದ್ದರ ಬಗ್ಗೆ ದುಃಖವಾಗುತ್ತಿದ್ದ ಹಾಗೆಯೇ ಕೂಗು ಮಾರಿಯ ನೆನಪೂ ಆಯಿತು. ನನ್ನ ಮಕ್ಕಳಿಗೆ ಸ್ವಾರಸ್ಯಕರವಾಗಿ ಕಥೆ ಹೇಳೋಣ ವೆಂದು ಕೊಂಡು ಕೂಗುಮಾರಿಯ ಕಥೆ ಹೇಳಲು ಹೊರಟೆ. ಇಬ್ಬರೂ ಜೋರಾಗಿ ನಕ್ಕರು. "ಮಮ್ಮಿ ನೀನು ಎಷ್ಟೊಂದು ಮೂರ್ಖಳಾಗಿದ್ದಿ" ಎಂದು ಒಬ್ಬಳು ಹೇಳಿದರೆ ಇನ್ನೊಬ್ಬಳು "ಇವತ್ತು ರಾತ್ರಿ ನಾನೇನಾದರೂ ಮೂರು ಸಲ ನಿನ್ನ ಹೆಸರು ಕೂಗಿದರೆ ಏನು ಮಾಡುತ್ತೀ" ಎಂದು ತುಂಟತನದಿಂದ ಪ್ರಶ್ನಿಸಿದಳು!

ಟಿ.ವಿ. ವಿಡಿಯೋ, ಬಸ್ಸು ಕಾರುಗಳ ಹಾವಳಿಯಲ್ಲಿ ರಾತ್ರಿಯಲ್ಲಿ ನಿಶ್ಶಬ್ದ ವಾದರೂ ಉಂಟೇ? ಈಗಿನ ಕಾಲದಲ್ಲೇನಾದರೂ ಕೂಗು ಮಾರಿ ಬಂದು ಹೆಸರು ಕೂಗಿದರೆ ಯಾರಿಗೂ ಕೇಳಿಸುವುದೇ ಇಲ್ಲವೇನೋ! 'ಶ್ರೀ ರಾಮ ಜಯಂ' ಎಂದು ಮನೆಯ ಮುಂದೆ ಬರೆದು, ಮೂರು ನಾಮ ಬಳಿದರೆ "ಹಿಂದೂ ಫಂಡಮೆಂಟಲಿಸ್ಟ್" ಎಂದು ಸರ್ಕಾರ ಜೈಲಿಗೆ ಕಳಿಸಿಬಿಟ್ಟರೆ?

ಗೊತ್ತಿರುವುದು

ನನಗೆ ಗೊತ್ತಿಲ್ಲ
ಪಮೇಲಾ
ಅಥವಾ
ಬೇರೆ ಕರೆವೆಣ್ಣು
ಗೊತ್ತಿರುವುದು
ಮೆಚ್ಚಿ ಏರಿಸಿದ
ಕೊರೆವೆಣ್ಣು

ಎಚ್ ದುಂಡಿರಾಜ್

ದಿವ್ಯ (ದೂರ) ವಾಣಿ

ಸೀ. ಆರ್ ಸತ್ಯ

ಬೆಂಗಳೂರಿನ ಮಲ್ಲೇಶ್ವರದ ಬಂಡೆಗಣೇಶ (ಬಂ.ಗ)	ಹಲೋ– ತಿರುಪತಿ ಎಕ್ಸ್‌ಚೇಂಜ್? - ಸ್ವಲ್ಪ ಲಾರ್ಡ್ ವೆಂಕಟೇಶ್ವರನಿಗೆ ಕನೆಕ್ಟ್ ಮಾಡಿ ಮ್ಯಾಡಂ –ಥ್ಯಾಂಕ್ಯೂ ಹಲೋ, ವೆಂಕ್ಟೂನಾ ? ವೆಂಕ್ಟೂ, ನಾನಪ್ಪ ಬಂಡೇ ಗಣೇಶ, ಬೆಂಗ್ಳೂರಿಂದ
ತಿರುಪತಿ ವೆಂಕಟರಮಣ ಸ್ವಾಮಿ (ತಿ.ವೆಂ)	ಓಹೋಹೋ ! ಏನು ಗಣಪೂ, ಇಷ್ಟು ದಿವಸಗಳಾದ ಮೇಲೆ ನನ್ನ ಜ್ಞಾಪಕ ಬಂತಾ ? ಹೇಗಿದೀ ಗಣಪೂ ? ಗುಡ್ ಓಲ್ಡ್ ಬ್ಯಾಚಲರ್ ಬಾಯ್ !

ಬಂ.ಗ. ವೆರಿ ಫೈನ್, ಥ್ಯಾಂಕ್ಯೂ ವೆಂಕ್ಟೂ. ನಾನಂತೂ ಇಲ್ಲಿ ಪಬ್ಲಿಕ್ ಬೂತಿಗೆ ಬಂದು ಕ್ಯೂನಲ್ಲಿ ನಿಂತ್ಕೊಂಡು ನಿನಗೆ ಫೋನ್ ಮಾಡ್ಬೇಕು. ನೀನಾದರೂ ನನಗೆ ಆಗಾಗ್ಗೆ S.T.D. ನಲ್ಲಿ ನನಗೆ ಪಕ್ಕದ ಮನೆಗೋ ಎಲ್ಲಿಗಾದರೂ ಮಾಡಬಾರದಾ ? ನಿನಗೇನು ದುಡ್ಡಿಗೆ ಕಮ್ಮಿ ?

ತಿ.ವೆಂ. ಸಾರಿ, ಗಣಪು, ಟೈಮ್ ಆಗಲಿಲ್ಲ. ಇಯರ್ ಎಂಡಿಂಗ್ ನೋಡು, ಭಕ್ತಾದಿಗಳು ಬರೋದು ಜಾಸ್ತಿಯಾಗಿದೆ. ಈ ವರ್ಷದ ಇನ್‌ಕಮ್ ಟ್ಯಾಕ್ಸು, ಕ್ಯಾಶ್ ಬ್ಯಾಲೆನ್ಸು ಅಡ್‌ಜಸ್ಟ್ ಮಾಡೋಕ್ಕೆ ಅಂತ ದಿನಕ್ಕೆ ಸಾವಿರಾರು ಮಂದಿ ಲಕ್ಷಾಂತರ ರೂಪಾಯಿಗಳನ್ನ ಹುಂಡಿಗೆ ಸುರಿದು ಬೆಳಿಗ್ಗೆಯಿಂದ ರಾತ್ರಿ ತನಕ ನನ್ನನ್ನ ಬೇಡ್ಕೊಳ್ಳೋಕ್ಕೆ ಬರ್ತಿದಾರೆ. ನನಗೂ ಸಾಕಾಗ್ತಿದೆ. ನೂರಾರು ವರ್ಷಗಳಿಂದ ಹೀಗೆ ನಿಂತ್ಕೊಂಡೇ ಇದೀನಿ ನೋಡು. ಕೂತ್ಕೊಂಡು ಯಾವಾಗ ರೆಸ್ಟ್ ತೊಗೋತೀನೋ ಕಾಣೆ. ಅಂದ್ಹಾಗೆ, ನೀನು ಹೇಗಿದೀ ಗಣಪೂ ?

ಬಂ ಗ. ಸೇಮ್ ಟಿಯರ್ ವೆಂಕ್ಟು, ನನಗೂ ಒಂದು ರೀತಿ ಸೀಸನ್ನು ! ಪರೀಕ್ಷೆ ಪತ್ರಿರ ಬಗ್ತಿದೆಯಲ್ಲಾ, ಬರೀ ಸ್ಟೂಡೆಂಟ್ಸು, ಅವರ ಅಪ್ಪ ಅಮ್ಮಂದಿರು, ಅವರ ಟೀಚರ್ಸು – ಇಷ್ಟೇ ನನ್ನ ಭಕ್ತಾದಿಗಳು. ಆಗಲೋ ಈಗಲೋ ಟ್ರಾನ್ಸ್‌ಫರ್, ಪ್ರಮೋಶನ್ ಕೇಸುಗಳು, ವಡೆ ಹಾರ, ಕಡುಬು ಹಾರ, ಚಕ್ಕಲಿ ಹಾರ, ಹಾಕಿಸ್ಕೊಂಡೇ ಕಾಲ ಕಳೀತಿದೀನಿ. ಬೆಲೆಗಳು ದುಬಾರಿ ಆಗಿರೋದರಿಂದ ಬೆಣ್ಣೆ ಅಲಂಕಾರ ಎಲ್ಲಾ ಬಿಟ್ಟೇ ಹೋಗಿದೆ. ಆದರೂ ಸಧ್ಯ, ನಿನ್ನ ತರಹ ನಾನು ನಿಂತ್ಕೊಂಡಿಲ್ಲಪ್ಪ, ಪುಣ್ಯಾತ್ಮರು ನನ್ನ ಇಲ್ಲಿ ಕೂರಿಸಿದಾರೆ. ಛೈದವೇ, ತಿರುಪತಿ ಪ್ರಸಾದ–ಲಡ್ಡು–ಬೆಲೆ ಜಾಸ್ತಿ ಆಗುತ್ತಂತೆ ?

ತಿ.ವೆಂ. ಅದರ ಮೇಲೆ ನನ್ನ ಕಂಟ್ರೋಲ್ ಏನೂ ಇಲ್ಲಪ್ಪ. ಒಂದು ಲಡ್ಡೂಗೆ ಇಪ್ಪತ್ತು ರೂಪಾಯಿ ಮಾಡ್ತಾರಂತೆ. ಎಲ್ಲಾ ಕಮಿಟಿಗಳು ಡಿಸೈಡ್ ಮಾಡೋದು. ನನ್ಯಾರು ಕೇಳ್ತಾರೆ ಬಿಡು. ಇಷ್ಟೆಲ್ಲಾ ಆಯ್ತು, ನಾನೇ ಇದುವರೆಗೆ ಅದರ ರುಚಿಯೋ ನೋಡಿಲ್ಲ.

ನಮ್ಮ
ದೂರವಾಣಿ: ತ್ರೀ ಮಿನಿಟ್ಸ್ ಓವರ್ !

ಬಂ.ಗ. ಪ್ಲೀಸ್ ಕಂಟಿನ್ಯೂ. ವೆಂಕ್ಟು, ಅಂದ್ಹಾಗೆ ನಮ್ಮ ಕಾಶಿ ವಿಶ್ವುನಿಂದಲೋ ಮಥುರಾ ಕೃಷ್ಣನಿಂದಲೋ ಏನಾದರೂ ಸುದ್ದಿ ಸಿಗ್ತೇನು ನಿನಗೆ ?

ತಿ.ವೆಂ. ವಿಶ್ವು ಕಾಗದ ಬರೆದಿದ್ದ ಗಣಪೂ, ಅವನೂ ಕೃಷ್ಣಾನೂ ಸ್ವಲ್ಪ ದಿವಸ ಊಟಿ, ಬೆಂಗಳೂರು ಕಡೆ ಬಂದು ಹೋಗೋದು ಅಂತ ಯೋಚಿಸ್ತಿದಾರಂತೆ. ಅವರ ಹೆಸರುಗಳು ಪೇಪರಿನಲ್ಲಿ, ಟೀವಿಯಲ್ಲಿ ಸ್ವಲ್ಪ ಜಾಸ್ತಿ ಕೇಳಿಬರ್ತಾ ಇರೋದರಿಂದ, "ನಮಗೂ ಏನಾದರೂ 'ಅಯೋಧ್ಯೆ' ಆಗ್ಹೋಗುತ್ತೋ ಏನೋ, ಆಮೇಲೆ ಜಾಸ್ತಿ ಓಡಾಡೊಕ್ಕೆ ಆಗೊಲ್ಲ. ಈಗಲೇ ಎಲ್ಲಾರು ಸುತ್ತಿಹಾಕ್ಕೊಂಡು ಬರೋಣ ಅಂತ ಇದೀವಿ" ಅಂತ ಬರೆದಿದ್ದ.

ಬಂ.ಗ. ನೀನು ಅಯೋಧ್ಯೆ ಅಂದ ತಕ್ಷಣ ಜ್ಞಾಪಕ ಬಂತು. ನಮ್ಮ ರಾಮು ಹೇಗಿದ್ದಾನಪ್ಪ ಅಲ್ಲಿ ? ಐಮೀನ್, ಈಸ್ ಹಿ ರಿಯಲೀ ಹ್ಯಾಪೀ ಅಂತೀನಿ ?

ತಿ.ವೆಂ. ನೋ ಕಾಂಟೇಕ್ಟ್ಸ್ ಗಣಪ್ಪೂ, ಇನ್ನೂ ಅವನಿಗೆ ಟೆಲಿಫೋನ್ ಕನೆಕ್ಷನ್ ಕೊಟ್ಟಿಲ್ಲವಂತೆ. ಅವನಿರೋದು ಇನ್ನೂ ಟೆಂಪರೊರಿ ಸ್ಟ್ರಕ್ಚರ್‌ನಲ್ಲಿ ಅಲ್ಲವಾ, ಅದಕ್ಕೇ ಕಾಗದ ಬರೆದರೆ ಲಕ್ನೊ, ಡೆಲ್ಲಿ ಅಂತ ಬೇರೆ ಯಾವದೋ ಪಿನ್ ಕೋಡಿಗೆ ಹೋಗ್ತಿವೆ ಗಣಪ್ಪೂ, ಸೆನ್ಸಾರಿಂಗೋ ಏನೋ, ಒಂದು ಕಾಗದಾನೂ ಅವನಿಗೆ ತಲುಪ್ತಿಲ್ಲಾ. ಬಿ ಬಿ.ಸಿ. ಪ್ರಕಾರ ಹುಷಾರಾಗಿದಾನೆ ಅಂತ ತಿಳ್ಕೊಂಡಿದೀನಪ್ಪಾ, ನಿನಗೇನಾದರೂ ಹೊಸ ಸುದ್ದಿ ತಿಳಿದರೆ ಹೇಳು.

ಬಂ.ಗ. ಖಂಡಿತಾ - - ಇನ್ನು ನಾ ಬರ್‍ಲಾ ವೆಂಕ್ಪೂ ?
ಹೀಗೆ ಮಾತಾಡ್ತಿದ್ದರೆ ತಗಲೋ ಟೆಲಿಫೋನ್ ಚಾರ್ಜು ನನ್ನ ತಲೆ ಕೊರೆಯೋಕ್ಕೆ ಶುರು ಮಾಡುತ್ತೆ. ಅದೂ ಅಲ್ಲದೆ ಕಡುಬು ಹಾರ ಹಾಕೋಕ್ಕೆ ಯಾರೋ ಭಕ್ತಾದಿಗಳು ಕಾದುಕೊಂಡು ನಿಂತ ಹಾಗಿದೆ. ಓಕೇ, ಸೀಯೂ ವೆಂಕ್ಪೂ. ಬೈಬೈ - -

ತಿ.ವೆಂ. ಬೈ ಬೈ ಗಣಪ್ಪೂ, ಕೀಪ್ ಇನ್ ಟಚ್ !

ನಮ್ಮ ದೂರವಾಣಿ
ಸ್ವಲ್ಪ ಗದರಿಸಿಕೊಂಡು: ಸಿಕ್ಸ್ ಮಿನಿಟ್ಸ್ ಓವರ್ !

ಶೇಕಡ ಹತ್ತರಷ್ಟು ರಸ್ತೆ ಅಪಘಾತಗಳು ಮದ್ಯಪಾನ ಮಾಡಿದ ಚಾಲಕರಿಂದ ಆಗುತ್ತವೆಂದು ಒಂದು ರ್‍ಯಾಂಡಮ್ ಸಮೀಕ್ಷೆಯಿಂದ ತಿಳಿದು ಬಂದಿದೆ.

—ಸರಿ ಮದ್ಯಪಾನ ಮಾಡದ ಚಾಲಕರು ವಾಹನಗಳನ್ನು ನಡೆಸ ಬಾರದೆಂದು ಕಾನೂನು ಮಾಡಿದರೆ ಶೇಕಡ ತೊಂಬತ್ತರಷ್ಟು ಅಪಘಾತ ಗಳನ್ನು ತಡೆಗಟ್ಟಬಹುದಲ್ಲವೇ ?

ಪೀಪಿ

ನಾಕನೆಯುವನು

ವ್ಯ. ಶಾ. ಜಯಕೇಸರಿ

ಅಂದು ಮೂರ್ಖರ ಮಠದಲ್ಲಿ ಸಂಭ್ರಮವೋ ಸಂಭ್ರಮ. ಕಾರಣ ಆ ದಿನ ಏಪ್ರಿಲ್ ಒಂದು ಮೂರ್ಖರದಿನ. ಆದಿನವೇ ವಿದೇಶದಿಂದವಾಪಸಾಗಿದ್ದ ಮೂರ್ಖ ಗುರುಗಳ ಸನ್ಮಾನವೂ ಏರ್ಪಾಡಾಗಿತ್ತು. ದೇಶದ ಮೂಲೆ ಮೂಲೆಗಳಿಂದ ಮೂರ್ಖ ಗುರುಗಳ ಶಿಷ್ಯಂದಿರು ಮಠಗಳ ಪ್ರತಿನಿಧಿಗಳೂ ವಿಶೇಷ ಸಂಖ್ಯೆಗಳಲ್ಲಿ ವಿಶೇಷ ಸಂಭ್ರಮದಿಂದ ನೂರ ಹನ್ನೊಂದು ಲಾಂಛನವನ್ನು, ಮೂರು ಶೂನ್ಯಗಳ ಲಾಂಛನವನ್ನೂ, ಹೊತ್ತು ಹಾಜರಿದ್ದರು. ಗುರುಗಳ ಉಪಸ್ಥಿತಿಗೆಂದೇ ದೊಡ್ಡ ವೇದಿಕೆಯನ್ನು ನಿರ್ಮಿಸಲಾಗಿತ್ತು. ಅಂದು ಅವರ ಬಾಯಿಂದ ಉದುರಬಹುದಾದ ಅಣಿ ಮುತ್ತುಗಳನ್ನು ಆಯ್ದು ಕೊಳ್ಳಲು, ಶೇಖರಿಸಿಡಲು, ಅವರ ಶಿಷ್ಯ ಕೋಟಿ ಮುಂದಿನ ಸಾಲುಗಳಲ್ಲಿ ಗೋಣಿ ಚೀಲಗಳೊಂದಿಗೆ ಕುಳಿತು ತೂಕಡಿಸುತ್ತಿದ್ದರು.

"ಗಾಂಪ ವಾಣಿ" ಮತ್ತು "ಗಾಂಪ ಮಿತ್ರ" ಜೋಡಿ ಪತ್ರಿಕೆಗಳ ಏಕೈಕ ಸಂಪಾದಕನಾದ ನನಗೆ ಆ ದಿನದ ಸುದ್ದಿ ಸಂಗ್ರಹಣೆಯ ಹೊಣೆಯು ದುರ್ದೈವ ವಶಾತ್ ನನ್ನಪಾಲಿಗೆ ಸಂದದ್ದು ನನ್ನ ಪೂರ್ವ ಜನ್ಮಗಳ ಪಾಪಾವಶೇಷವೇ ಕಾರಣ.

ಹಿನ್ನಲೆ

ನಮ್ಮ ಗಾಂಪ ಗುರುಗಳಾದ ಮೂರ್ಖರು ವಿದೇಶಕ್ಕೆ ಹೋಗಿ ಬರಬೇಕಾಗಿ ಬಂದ ಪ್ರಮೇಯವನ್ನು ಈಗಾಗಲೇ ನಮ್ಮ ಪತ್ರಿಕೆಗಳ ಅನೇಕ ಆವೃತ್ತಿಗಳಲ್ಲಿ ವರದಿ ಮಾಡಿದ್ದೇವೆ. ಗ್ರಹಚಾರವೆಂದರೆ ಪ್ರಕಟವಾದ ಸುದ್ದಿಗಳನ್ನು ಓದಬೇಕಾದ ಕ(ಖ)ರ್ಮವು ಸಂಪಾದಕನಾದ ನನಗೂ, ಅಚ್ಚುಗಳನ್ನು ಜೋಡಿಸುವ ನನ್ನ ಮಡದಿಗೂ ಮತ್ತು ಕರಡನ್ನು ತಿದ್ದುವ ನನ್ನ ಮಿತ್ರನಿಗೂ ಬಡಿದು ಇರುವುದರಿಂದ ಮತ್ತು ಉಳಿದ ಇನ್ನಿತರರು ಯಾರೂ ಓದಿಲ್ಲವೆಂಬ ಖಾತರಿಯಿಂದ ಮೊದಲಿನಿಂದ ಎಲ್ಲವನ್ನೂ ತಿಳಿಸಬೇಕಾದ ಪರಿಸ್ಥಿತಿಯೊದಗಿದೆ.

ಗಾಂಪರೊಡೆಯರ ಅನಾರೋಗ್ಯದ ಕಾರಣ ಮತ್ತು ವಯೋಧರ್ಮಕ್ಕನು ಗುಣವಾಗಿ ನಿವೃತ್ತಿ ಬಯಸಿದ ನಂತರ ಗಾಂಪ ಪುರೋಭಿವೃದ್ಧಿ ಕಾರ್ಯವು ಅವರ ಶಿಷ್ಯೋತ್ತಮರಾದ ಮಂಕ, ಮಡೆಯ, ಮಡ್ಡಿ, ಮೂರ್ಖ, ಮುರ್ಠಾಳರ ಪಾಲಿಗೆ

ಬಂದವು. ಅವರ ಖ್ಯಾತಿಯಿಂದ ಮೂಲೆ ಮೂಲೆಗಳಲ್ಲಿ, ಸಂದುಗೊಂದುಗಳಲ್ಲಿ, ನಾಯಿ ಕೊಡೆಗಳಂತೆ ಅನೇಕ ಆಶ್ರಮಗಳು ಸ್ಥಾಪನೆಗೊಂಡವು. ನಮ್ಮ ದೇಶದಲ್ಲಿ ಗಾಂಪರ ಸಂಖ್ಯೆಯೇ ಹೆಚ್ಚಾಗಿರುವುದರಿಂದ ಮಠಗಳಲ್ಲಿ ಶಿಷ್ಯರ ಕೊರತೆಯುಂಟಾಗ–ಲಿಲ್ಲ, ಬದಲಾಗಿ ರಕ್ತ ಬೀಜಾಸುರನ ಸಂತಾನದಂತೆ ದಿನೇ ದಿನೇ ವೃದ್ಧಿಯಾಗ ತೊಡಗಿತು,

ಮಠದಲ್ಲಿ ಶಿಷ್ಯರಿಗೋ ಊಟ ಮತ್ತು ನಿದ್ರೆಯ ವಿನಾ ಬೇರೊಂದು ಕಾರ್ಯ ವಿರದಿದ್ದ ಪ್ರಯುಕ್ತ ಅವರ ದೇಹ ಅಗಾಧವಾಗಿ ಬೆಳೆಯತೊಡಗಿತಲ್ಲದೇ, ಆಶ್ಚರ್ಯ ಕರವಾಗಿ ಜೀರ್ಣ ಶಕ್ತಿಯು ವೃದ್ಧಿಯಾಗತೊಡಗಿತು, ಉಪಯೋಗಿಸದೇ ಇಟ್ಟ ಕತ್ತಿಯು ತುಕ್ಕು ಹಿಡಿಯುವಂತೆ ಗಾಂಪರ ಬುದ್ಧಿ ಶಕ್ತಿಯು ಕ್ರಮೇಣವಾಗಿ ಮಂದ-ವಾಗತೊಡಗಿ ಗಾಂಪ ಕೀರ್ತಿ ಬತೇರಿಗೆ ಧ್ವಜವನ್ನೇರಿಸುವಂತಾಯಿತು. ಮೂರ್ಖ ಮಠದ ಶಿಷ್ಯರ ಕೀರ್ತಿ ಮುಂದುವರೆದು ಪ್ರತಿಯೋರ್ವ ಬುದ್ಧಿವಂತನ ಬಾಯಿಯಲ್ಲಿ ಹಾಸ್ಯಕ್ಕೆ ಹೆಸರಾಗಿ ಶಾಶ್ವತವಾಗುಳಿಯಲಾರಂಭಿಸಿದರು.

ಏನಕೇನ ಪ್ರಕಾರೇಣ ಗಾಂಪರ ಕೀರ್ತಿಯು ದೇಶಾದ್ಯಂತ, ತನ್ಮೂಲಕ ವಿಶ್ವಾದ್ಯಂತ ಹರಡುತ್ತಿರುವುದನ್ನು ಕಂಡು ಮಠದ ಕೆಲ ತಿಳಿಗೇಡಿಗಳಿಗೆ ಸಹಿಸ ದಾಯಿತು. ಅವರು ಹೊರಗಿನ ಕೆಲ ಬುದ್ಧಿವಂತರನ್ನು ಒಟ್ಟುಗೂಡಿಕೊಂಡು ಪಿತೂರಿ ನಡೆಸಿ ಗುಟ್ಟಾಗಿ ಕೆಲ ಗಾಂಪರ (ಗುರುಗಳನ್ನೂ ಸೇರಿ) ಕಿವಿ ಚುಚ್ಚಲು ಪ್ರಾರಂಭಿಸಿದರು. ಇದರಿಂದ ಮಠದಲ್ಲಿ ವಿದ್ಯಾಕ್ರಾಂತಿಯಾಗುವುದೇನೋ ಎಂಬ ಮಟ್ಟಿಗೆ ಕೆಲವರು ಭಯಭೀತರಾದರು. ಪಂಚ ಗುರುಗಳು ಇದರ ಬಗ್ಗೆ ಆತಂಕ ಗೊಂಡು ತಲೆ ಕೆರೆದುಕೊಳ್ಳಲು ಪ್ರಾರಂಭಿಸಿ ನಿದ್ದೆ ಕೆಡುವವರೆಗೂ ನಡೆಯಿತು. ಅದರ ಫಲವೋ ಎಂಬಂತೆ ನಮ್ಮ ಜಿಲ್ಲೆಯ ಮಹಾನಗರಿಯ ಸಂತೇ ಬೀದಿಯಲ್ಲಿ ಶೂನ್ಯ ಮಾಸದ ಅಮಾವಾಸ್ಯೆಯಂದು ಮೂರ್ಖ ಮಹಾ ಸಮ್ಮೇಳನವು ಒಂದು ವಾರದವರೆಗೆ ಜರುಗಿ ಮುಂದೆ ತಿಳಿಸಿರುವಂತೆ ಠರಾವು ಮಂಡಿಸಿ ಮಂಗಳವಾರ ಮುಂಜಾನೆ ವಿದ್ಯುಚ್ಛಕ್ತಿ ಇಲ್ಲದ ವೇಳೆಯಲ್ಲಿನ ಕಾರ್ಗತ್ತಲಿನಲ್ಲೇ ತೀರ್ಮಾನ ಗಳನ್ನೂ ತೆಗೆದುಕೊಳ್ಳಲಾಯಿತು.

1. ದಿನೇ ದಿನೇ ಸಂಖ್ಯೆಗಳಲ್ಲಿ ವೃದ್ಧಿಯಾಗುತ್ತಿರುವ ಶಿಷ್ಯ ವೃಂದವು ವಿಶ್ವಾದ್ಯಂತ ಗಾಂಪ ಕೀರ್ತಿಯನ್ನು ಹರಡುತ್ತಿರುವುದು ಮಹಾ ಸಂತೋಷದ ವಿಷಯವಾದರೂ ಆ ಕೀರ್ತಿ ವಿಶ್ವವನ್ನು ದಾಟಿ, ಚಂದ್ರ ಲೋಕವನ್ನು ತಲುಪುವ ಭಯ ಉಂಟಾಗಿರುವುದರಿಂದ, ಕನಿಷ್ಠ ಪಕ್ಷ ಕೆಲವು ಗಾಂಪರಾದರೂ ಸಾಮಾನ್ಯ ಜ್ಞಾನಾರ್ಜನೆಯನ್ನು ಪಡೆಯುವುದು ಲೋಕದ ಹಿತ–ದೃಷ್ಟಿಯಿಂದ ಒಳ್ಳೆಯದು.

ಈ ನಿಟ್ಟಿನಲ್ಲಿ ಗಾಂಪ ಗುರುಗಳೂ ಗಾಂಪ ಶ್ರೇಯೋಭಿಲಾಷಿಗಳೂ ಶೀಘ್ರವೇ ಕಾರ್ಯೋನ್ಮುಖರಾಗತಕ್ಕದ್ದು.

2. ಈ ಕಾರ್ಯಕ್ಕಾಗಿ ಒಂದು ವರ್ಷ ಕಾಲ ತಮ್ಮ ತಮ್ಮವರಲ್ಲೇ ಅತಿ ಬುದ್ಧಿವಂತರೆಂದು ಕುಖ್ಯಾತರಾದ ಶ್ರೀ ಶ್ರೀ ಶ್ರೀ ಮೂರ್ಖ ಶಿಖಾಮಣಿ ಗುರು-ಗಳನ್ನು ಅಮೇರಿಕಾ ಅಥವಾ ಇಂಗ್ಲೆಂಡಿಗೆ ಉನ್ನತ ವ್ಯಾಸಂಗಕ್ಕಾಗಿ ಕಳುಹಿಸುವುದು ಮತ್ತು ಅವರು ಅಲ್ಲಿಂದ ಬಂದ(ರೆ) ನಂತರ ಉಳಿದೆಲ್ಲಾ ಶಿಷ್ಯರಿಗೂ ಮೂರ್ಖೋ-ಪದೇಶ ಮಾಡತಕ್ಕದ್ದು.

ಎರಡನೇ ಠರಾವನ್ನು ಮಂಡಿಸಿ ಸರ್ವಾನುಮತದಿಂದ ಅಂಗೀಕಾರಗಳಿಸಿದ ಮುರ್ಖಾಳ ಗುರುಗಳನ್ನು ಸಂದರ್ಶಿಸುವ (ಪತ್ರಿಕೆಗಾಗಿ) ದೌರ್ಭಾಗ್ಯ ಕೂಡ ನನ್ನದೇ ಆದಾಗ ಅವರನ್ನು ಪ್ರಶ್ನಿಸಿದ್ದೆ. ಹೌದು ನೀವು ಉನ್ನತ ವ್ಯಾಸಂಗಕ್ಕಾಗಿ ಅಮೇರಿಕಾ ಅಥವಾ ಇಂಗ್ಲೆಂಡನ್ನೇ ಸೂಚಿಸಿದ್ದು ಏಕೆ ?

ಮುರ್ಖಾಳ ಗುರುಗಳು ಮಂದಸ್ಮಿತರಾದರು. ಇಷ್ಟು ಕೂಡ ನಿನಗೆ ತಿಳಿ-ದಿಲ್ಲವೇನೋ ಮೂಢ ಎಂಬಂಥ ಮುಖ ಮಾಡಿ "ನಂ ದೇಶದ ಜನಗೋಳಿಗಿಂತ ಆ ದೇಸದ ಜನಗಳು ತುಂಬಾ ಬುದ್ಧಿವಂತರೆಂದು ನಮಗೆ ತಿಳಿದು ಬಂದೈತೆ. ಅಲ್ಲಿ ಉಟ್ಟಿದ ಉಡುಗ ಉಡುಗಿಯರು ತಮ್ಮ ತಂದೆ ತಾಯಿಗಳನ್ನು ಇಂಗ್ಲೀಸಿನಲ್ಲೇ ಮಂಮಿ ಡ್ಯಾಡಿ ಅಂತ ಕರೀತವಂತೆ, ಉಟ್ಟುತಾನೇ ಇಂಗ್ಲೀಸು ಮಾತನಾಡಥಾವಂತೆ ನಂ ದೇಸದ ಐಕಳು ಇಷ್ಟು......... ನಿದ್ರೆಯಿಂದ ನನಗೆ ಎಚ್ಚರಾಗುವವರೆಗೆ ಏನೇನೋ ಬಡಬಡಿಸಿದರೋ ಎಲ್ಲವನ್ನೂ ಬಿಡದೇ ಪತ್ರಿಕೆಯಲ್ಲಿ ವರದಿ ಮಾಡಿದ್ದೆ ಎನ್ನಿ.

ನಮ್ಮ ಪತ್ರಿಕೆಗಳ ಅದೃಷ್ಟವೋ, ಮೂರ್ಖರುಗಳ ದುರಾದೃಷ್ಟವೋ. ಒಟ್ಟಿನಲ್ಲಿ ಗಾಂಪರ ಹೃದಯ (ವಿದ್ದರೆ) ಸ್ಥಂಬನಗೊಳಿಸುವ ಸುದ್ದಿಯೊಂದು ಸಮ್ಮೇಳನ ಜರುಗಿದ ಮರು ಅಮಾವಾಸ್ಯೆಯಂದೇ ದೊರಕಿತು. ಅದಂದರೆ, ಯಾರಾದರೂ ಪ್ರಾಯೋಜನಕರು ಸಿಕ್ಕರೆ, ಅಪ್ರಯೋಜಕರೆಂದು ಖ್ಯಾತಿ ಮತ್ತು ಮೂರ್ಖ ಗುರುಗಳಿಗೆ ಆರು ತಿಂಗಳ ಕಾಲ ಉನ್ನತ ಶಿಕ್ಷಣ ಕೊಟ್ಟು ಅವರ ಬುದ್ಧಿಗೆ ಹಿಡಿಯುವ ಕೆಲಸದ ಗುತ್ತಿಗೆಯನ್ನು ಅಮೇರಿಕಾದ ಖಾಸಗಿ ವಿಶ್ವ ವಿದ್ಯಾಲಯ(!) ಒಪ್ಪಿಕೊಂಡಿತ್ತು.

ಅನೇಕ ದೂರದರ್ಶನ ಕಾರ್ಯ ಕ್ರಮಗಳಿಗೇ ಸಿಕ್ಕುವ ಈ ಕಾಲದಲ್ಲಿ ಉನ್ನತ ಶಿಕ್ಷಣ ಬಯಸಿದ ಗುರುಗಳಿಗೆ ಪ್ರಾಯೋಜಕರು ಸಿಕ್ಕುವ ಈ ಕಾಲದಲ್ಲಿ ಉನ್ನತ

ಬಯಸಿದ ಗುರುಗಳಿಗೆ ಪ್ರಾಯೋಜಕರು ಸಿಗಲಾರರೆ? ಅನೇಕ ಪ್ರಾಯೋಜಕರು ಮುಂದೆ ಬಂದು ಗುರುಗಳ ಉನ್ನತಿ ಬಯಸಿ ಹೊರ ದೇಶದಲ್ಲಿ ಅವರು ಕೀರ್ತಿಶೇಷ ರಾಗಲೆಂದು ಹಾರೈಸಿ ಅವರನ್ನು ಸಾಗಹಾಕಲು ಸನ್ನದ್ಧರಾದರು.

ಅಂತೂ ಇನ್ನೊಂದು ಅಮಾವಾಸ್ಯೆ ಮಟಮಟ ಮಧ್ಯಾಹ್ನ ರಾಹುಕಾಲದ ಮಧ್ಯಗಳಿಗೆಯಲ್ಲಿ ಗುರುಗಳು ವಿಮಾನ ಹತ್ತಿ ತಮ್ಮ ಪಾದ ಧೂಳಿನಿಂದ ವಿಮಾನ ವನ್ನು ಅಪವಿತ್ರಗೊಳಿಸಿದರು. ಆದರೂ ಆ ವಿಮಾನ ಗುರುಗಳನ್ನು ಹೊತ್ತು ವಿಮಾನ ನಿಲ್ದಾಣವನ್ನು ಬಿಟ್ಟು ಹೊರಡುವುದನ್ನು ಅನೇಕ ಗಾಂಪ ಭಕ್ತರು ದೂರ ದರ್ಶನದಲ್ಲಿ ವೀಕ್ಷಿಸಿದರು.

ಮುಂದೆ ಅಮೇರಿಕಾದಲ್ಲಿ ಗುರುಗಳು ನಡೆಸಿದ ಅನೇಕ ಪವಾಡಗಳು ನಮ್ಮ ಪತ್ರಿಕೆಗಳಲ್ಲಿ ವರ್ಣರಂಜಿತವಾಗಿ ಪ್ರಕಟವಾಗಿದ್ದಾಗ್ಯೂ, ಸುದ್ದಿ ಓದಿದ ಹಲವರನ್ನು ಗಮನದಲ್ಲಿಟ್ಟುಕೊಂಡು ಮತ್ತೊಮ್ಮೆ (ಬೇಡ ಬೇಡವೆಂದರೂ) ವಿವರಿಸುತ್ತೇನೆ.

ಮೂರ್ಖ ಗುರುಗಳ ಬುದ್ಧಿ ಮತ್ತೆಯ ಖ್ಯಾತಿ ಅಲ್ಲಿನ ಜನಗಳಿಗೆ, ಮುಖ್ಯ ವಾಗಿ ವಿದ್ಯಾಲಯದವರಿಗೆ ತಿಳಿಯಲು ಹೆಚ್ಚಿನ ಸಮಯ ಬೇಕಾಗಲಿಲ್ಲ. ಕೇವಲ ಆರು ತಿಂಗಳ ಅವಧಿಯಲ್ಲಿ ಮುಗಿಯಬಹುದಾದ ಶಿಕ್ಷಣವನ್ನು ಆರು ವರ್ಷದವರೆಗೆ ಲಂಬಿಸಿ ವಿವರಿಸಿದರೂ ಏಳನೇ ವರ್ಷದ ಮೊದಲನೆಯ ದಿವಸಕ್ಕೆ ಆ ವಿಷಯವು ಗುರುಗಳಿಗೆ ಹೊಸತಾಗುವ ಬಗ್ಗೆ ತಿಳಿದು ಅಚ್ಚರಿಪಟ್ಟರು. ಆದ್ದರಿಂದ ಆರು ತಿಂಗಳ ಅವಧಿಯನ್ನು ಕೇವಲ ಆರು ದಿನಗಳಿಗೆ ಸೀಮಿತಗೊಳಿಸಿ ಕೈ ತೊಳೆದು ಕೊಳ್ಳಲು ನಿರ್ಧರಿಸಿ ಹಾಗೆಯೇ ಮಾಡಿದರು. ಆದರೆ ಗುರುಗಳು ಸ್ವದೇಶಕ್ಕೆ ಮರಳಲು ವಿಮಾನದಲ್ಲಿ ಸ್ಥಳಾವಕಾಶ ಕೊಡಿಸಲು ತಿಂಗಳವರೆಗೆ ಕಾಯಬೇಕಾಯಿತು. ಅದಕ್ಕಿಂತ ಹೆಚ್ಚಿನ ಕಷ್ಟ ವಿ.ವಿ.ದವರಿಗೆ ತಲೆದೋರಿದ್ದೆಂದರೆ ಗುರುಗಳು ಹೊರಗೆ ಹೋಗಿ ತಮ್ಮ ಜ್ಞಾನಾರ್ಜನೆಯನ್ನು ಪ್ರಕಟಗೊಳಿಸದಂತೆ ತಡೆಯುವುದು. ಅದಕ್ಕಾಗಿ ಗುರುಗಳಿಗೆ ಒಂದು ಭವ್ಯವಾದ ಕೊರಡಿಯನ್ನು ಗೊತ್ತುಪಡಿಸಿ ಗುರುಗಳನ್ನು ಅದರಲ್ಲಿ ಸ್ಥಾಪಿಸಿ, ಅವರು ಎಚ್ಚರವಾಗದಂತೆ ಮತ್ತು ಎಚ್ಚರವಾದಾಗ ಮತ್ತೆ ಮತ್ತೆ ಸರಬರಾಜು ಮಾಡಲು ಪಾನಕ ಮತ್ತು ಸಿಬ್ಬಂದಿಯನ್ನು ಗೊತ್ತುಮಾಡಿದರು. ಎಂದಿಗೆ ಈ ಗುರುಗಳನ್ನು ಸ್ವದೇಶಕ್ಕೆ ಸಾಗಹಾಕಿ ಸರಾಗವಾಗಿ ಉಸಿರಾಡಿ ಬದುಕುವೆವೊ ಎಂಬ ಕಾತರದಿಂದ ದಿನಗಳನ್ನು ಕಳೆಯತೊಡಗಿದರು.– ವಿ.ವಿ. ಸಿಬ್ಬಂದಿ, ಮುಳ್ಳಿನ ಮೇಲೆ ಒಂಟಿ ಕಾಲಲ್ಲಿ ನಿಂತವರಂತೆ.

ರಾತ್ರಿ ಕಳೆದ ಮೇಲೆ ಹಗಲು ಬರುವಂತೆ, ಕಹಿ ಔಷಧ ಕುಡಿದ ನಂತರ ರೋಗದಿಂದ ಮುಕ್ತಿ ಹೊಂದಿ ಸಂತೋಷಪಡುವಂತೆ ಗುರುಗಳು ಪ್ರಯಾಣ ಮಾಡಬೇಕಾದ ಸಮಯವೂ ಬಂದುಬಿಟ್ಟಿತು. ಗುರುಗಳು ಅಲ್ಲಿದ್ದ ಕಡೆಯ 24 ತಾಸುಗಳು ಅವರಿಗೆ ಪಾನನಿಷಿದ್ಧ ಎಲ್ಲಿ ಅವರು ಪಾನಮತ್ತರಾಗಿ ಅಲ್ಲಿಯೇ ಉಳಿದು ಅವರಿಗೆ (ವಿ.ವಿ. ರವರಿಗೆ) ತೊಂದರೆಯಾಗಬಾರದೆಂಬ ಒಂದೇ ಒಂದು ಒಳ್ಳೆಯ ದೃಷ್ಟಿಯಿಂದ.

ವಿಮಾನ ಹೊರಡಲು ಅರ್ಧಗಂಟೆ ಅಥವಾ ಒಂದು ಗಂಟೆ ಮುಂಚೆ ಬಂದರೆ ಗುರುಗಳ ಅಚಾತುರ್ಯದಿಂದ ಗುರುಗಳಿಗೆ ವಿಮಾನ ತಪ್ಪಿ ಹೋಗುವುದೋ ಎಂಬ ಹೆದರಿಕೆಯಿಂದ ಅವರನ್ನು ವಿಮಾನ ಹೊರಡುವ ಮೂರು ಗಂಟೆಯ ಮೊದಲೇ ಅವರನ್ನು ವಿಮಾನ ನಿಲ್ದಾಣಕ್ಕೆ ತರಲಾಗಿತ್ತು. ಒಂದು ವೇಳೆ ಗುರುಗಳು ಮನಸ್ಸು ಬದಲಾಯಿಸಿ ಅಲ್ಲಿಯೇ ಉಳಿದುಕೊಳ್ಳಲು ಅನುಕೂಲವಾಗದಂತಹ ರಕ್ಷಣಾ ಸಿಬ್ಬಂದಿಯ ವ್ಯವಸ್ಥೆಯಾಗಿತ್ತು. ಅಲ್ಲದೇ ಆ ಸಿಬ್ಬಂದಿ ಗುರುಗಳನ್ನು ಹೊತ್ತ ವಿಮಾನ ನಿಲ್ದಾಣವನ್ನು ದಾಟಿದ ಸುದ್ದಿಯನ್ನು ಖಚಿತಪಡಿಸಿಕೊಂಡ ನಂತರವೇ ವಾಪಸ್ಸು ಬರಲು ಅಪ್ಪಣೆ ವಿಧಿಸಲಾಗಿತ್ತು.

ಇವೆಲ್ಲವುದರ ಜೊತೆಗೆ ಗುರುಗಳು ವಿಮಾನದಲ್ಲಿ ಬಾಯಿಬಿಟ್ಟು ಒಣ್ಣಗೇಡು ಮಾಡುವುದರ ಜೊತೆಗೆ ತಮ್ಮ ಬಾಯಿಯ ದುರ್ಗಂಧವನ್ನು ಇನ್ನಿತರ ಸಹ ಪ್ರಯಾಣಿಕರಿಗೆ ಪ್ರಸರಿಸಬಹುದೆಂಬ ಶಂಕೆಯಿಂದಲೊ, ಏನೋ ಅವರು ಹಾಗೆ ಮಾಡದಂತೆ ನೋಡಿಕೊಳ್ಳಲು ಆ ವಿಮಾನ ಚಾಲಕನಿಗೆ ಸೂಕ್ತ ನಿರ್ದೇಶನವನ್ನು ಕೊಡಲಾಗಿತ್ತು. ಗುರುಗಳಿಗೆ ಅರ್ಥವಾಗುವ ಭಾಷೆ ವಿಮಾನ ಚಾಲಕನಿಗೆ ಬರು ತ್ತಿದ್ದುದು ಈ ನಿಟ್ಟಿನಲ್ಲಿ ಒಂದು ಉಪಯೋಗವೇ ಆಯಿತೆನ್ನಿ.

ತನ್ನ ಅದೃಷ್ಟವನ್ನು ಶಪಿಸಿಕೊಳ್ಳುತ್ತಾ ಬಂದ ವಿಮಾನ ಚಾಲಕ, ವಿಮಾನ ಹೊರಡಲು ಇನ್ನೂ ಎರಡು ಗಂಟೆಗಳ ಅವಧಿ ಇರುವಂತೆಯೇ ಎಲ್ಲಾ ಪ್ರಯಾ ಣಿಕರು ತಮ್ಮ ತಮ್ಮ ಆಸನದಲ್ಲಿ ಆಸೀನರಾಗುವ ಮುನ್ನವೇ ಗುರುಗಳ ಕೈಹಿಡಿದು ಕೊಂಡು (ದರದರನೇ) ಎಳೆದುಕೊಂಡು ಹೋದ.

ವಿಮಾನದಲ್ಲಿ ಗುರುಗಳನ್ನು ತಮ್ಮ ಆಸನದಲ್ಲಿ ಕುಕ್ಕರುಬಡಿಸಿದವನೇ ಗುರು ಗಳಲ್ಲಿ ತಿಳಿಸಿದ, ವಿಮಾನ ಚಾಲಕ. "ಸ್ವಾಮಿ, ತಮ್ಮಲ್ಲಿ ಒಂದು ಸರಳ ಪ್ರಶ್ನೆ ಯನ್ನು ಬಿನ್ನವಿಸಿಕೊಳ್ಳುತ್ತೇನೆ. ಅದಕ್ಕೆ ಉತ್ತರವನ್ನು ತಾವಲ್ಲದೇ ಬೇರೆಯವರ ಸಲಹೆಯನ್ನು ಪಡೆಯದ ನೀಡಿದಲ್ಲಿ ಮಾತ್ರ ನನಗೆ ಸಮಾಧಾನ. ಒಂದು ವೇಳೆ ತಮಗೆ ಉತ್ತರ ಗೊತ್ತಾಗದಿದ್ದ ಪಕ್ಷದಲ್ಲಿ ನಾನೇ ತಮಗೆ ಮದ್ರಾಸಿನಲ್ಲಿ ವಿಮಾನ ಇಳಿದ ನಂತರ ಉತ್ತರ ಬೆಸಸುವೆ. ಅಲ್ಲಿಯವರೆಗೂ ಶಾಂತರಾಗಿ ಆಲೋಚನೆಗೈಯು ತ್ತಿರತಕ್ಕದ್ದು" ಎಂದು ಕೈ ಮುಗಿದು ಕೇಳಿಕೊಂಡ. "ದಯಮಾಡಿ ಗಮನವಿಟ್ಟು ಕೇಳಿ ನನ್ನ ಪ್ರಶ್ನೆಯನ್ನು" ಎಂದು ಈ ರೀತಿ ಹೇಳಿದ. "ನಿಮ್ಮ ವಿಮಾನ ಚಾಲಕ ನಾದ ನನ್ನ ಮನೆಯಲ್ಲಿ ನಾಲ್ಕು ಜನ ಇರುವೆವು. ಒಂದು ನನ್ನ ಹೆಂಡತಿ, ಇನ್ನುಳಿದ ಎರಡು ಮಕ್ಕಳು, ನಾಲ್ಕನೆಯವರು ಯಾರು ?"

ವಿಮಾನ ನಿಲ್ದಾಣದಿಂದ ಕಾರಿನಲ್ಲಿ ನಮ್ಮ ಊರಿಗೆ, ತಮ್ಮ ಸ್ವಮಠಕ್ಕೆ ಹಿಂತಿರುಗಿದ ಗುರುಗಳನ್ನು ಅವರ ಪ್ರವಾಸ ವಿಷಯವನ್ನು ಸಮಸ್ತರಿಗೆ ತಿಳಿಸುವ ಒಂದೇ ಒಂದು ಉದ್ದೇಶದಿಂದ, ಗುರುಗಳನ್ನು ಸಂದರ್ಶಿಸಲು ನಾನೇ ಖುದ್ದಾಗಿ ಹೊರಟೆ.

ಎಲ್ಲಾ ವಿವರಗಳನ್ನು ತಿಳಿಸಿದ ಗುರುಗಳು ಅಮೇರಿಕಾ ವಿಮಾನ ನಿಲ್ದಾಣ ದಿಂದ ಇಲ್ಲಿನ ವಿಮಾನ ನಿಲ್ದಾಣದವರೆಗೆ ವಿಮಾನದಲ್ಲಿ ಪಟ್ಟ ಬವಣೆಯನ್ನು

ವಿವರಿಸುತ್ತಾ ಪ್ರಶ್ನೆಗೆ ಉತ್ತರ ಪಡೆಯಲು ತಮ್ಮ ಬಳಿಯಿದ್ದ ಕ್ಯಾಲ್ಕುಕ್ಯುಲೇಟರ್ ನಲ್ಲಿ ನಾಲ್ಕರಿಂದ ಒಂದು ಕಳೆದು ಮತ್ತೆ ಎರಡು ಕಳೆದು ನಾಲ್ಕು ಸೇರಿಸಿ ಮೂರು ಕಳೆದು – ಗುಣಿಸಿ. ಭಾಗಿಸಿ. ಮತ್ತೆ ಕೂಡಿ, ಕಳೆದು ಏನೆಲ್ಲಾ ಪ್ರಯತ್ನಿಸಿದರೂ. ತಮ್ಮ ಬಳಿಯಿದ್ದ ಎಲ್ಲಾ ಕಾಲ್ಕುಕ್ಯುಲೇಟರ್‌ಗಳನ್ನು ಉಪಯೋಗಿಸಿ ಎಲ್ಲಾ ಗುಂಡಿಗಳನ್ನು ಒತ್ತಿದರೂ ಉತ್ತರ ಬಾರದೇ ಕಂಗಾಲಾಗಿ ಸೌಖ್ಯ ನಿದ್ರೆ ತೆಗೆದರಂತೆ. ವಿಮಾನದಿಂದ ಇಳಿದವನೇ ಆ ಚಾಲಕ ತನ್ನ ಪ್ರಶ್ನೆಗೆ ಉತ್ತರ ತಿಳಿಸಿದ್ದನಂತೆ.

"ಏನು ಗುರುಗಳೇ ಉತ್ತರ" ಪ್ರಶ್ನಿಸಿದ್ದ ಭಕ್ತಿಯಿಂದ,

"ಏಪ್ರಿಲ್ ಒಂದರಂದು ಜರುಗುವ ನಮ್ಮ ಉಟ್ಟು ಅಬ್ಬದಂದು ನಮ್ಮ ಎಲ್ಲಾ ಸಿಸ್ಯರ ಸಮ್ಮುಖದಲ್ಲಿ ತಿಳಿಸುತ್ತೇವೆ." ಎಂದು ನಮ್ಮನ್ನು ಕುತೂಹಲಗೊಳಿಸಿದರು.

ಗುರುಗಳು ತಮ್ಮ ವಿದೇಶ ಪ್ರವಾಸದ ಅನುಭವವನ್ನು ಎಲ್ಲರ ಮುಂದೆ ತೋಡಿಕೊಂಡು ತಾವು ಅರ್ಜಿಸಿದ ಜ್ಞಾನವನ್ನು ಎಲ್ಲರಿಗೂ ಹಂಚಿ. ಎಲ್ಲಕ್ಕೂ ಮುಖ್ಯವಾದ ಸಮಸ್ಯೆಗೆ ಯಾವ ರೀತಿ ಉತ್ತರವನ್ನು ನೀಡುವರೋ ಎಂಬಿತ್ಯಾದಿ ವಿಷಯಗಳನ್ನು ಅರಿಯಲು ಮಠದ ಅಂಗಳದಲ್ಲಿ ಜಮಾಯಿಸಿದ್ದ ಜನಜಂಗುಳಿಯು ವಿಶೇಷ.

ಪ್ರಸ್ತುತ :

ಮಠದ ಪೂಜ್ಯ ತೀರ್ಥ ಪ್ರಸಾದ ಸೇವನೆಯಿಂದ ಕೇವಲ ಎರಡು ಗಂಟೆ ತಡವಾಗಿ ಬಂದ ಗುರುಗಳು ತಮಗಾಗಿ ತಯಾರಿಸಿದ್ದ ಪೀಠದಮೇಲೆ ಕುಳಿತುಕೊಂಡರು. ಕಣ್ಣು ಮುಚ್ಚಿ ಸ್ವಲ್ಪ ಹೊತ್ತು ಗೊಣಗೊಣಿಸಿ, ಕಣ್ತೆರೆದು ತಮ್ಮ ಅಮೃತವಾಣಿಯಿಂದ ಇಂತೆಂದರು. ನಾವು 'ನಿಮ್ಮ ಉದ್ದಾರಕ್ಕಾಗಿ, ಏಳಿಗೆಗಾಗಿ ಶ್ರಮಪಟ್ಟು ಹಗಲು ರಾತ್ರಿ ದೇಸ ವಿದೇಸ ಎಂಬಂತ ವ್ಯತ್ಯಾಸ ಮರೆತು ಬಹಳ ಕಷ್ಟಪಟ್ಟು ನಮ್ಮ ನಿಮ್ಮ ತಲೆಗೆ ಹೆಟಕಲಾರದಂತ, ನಮ್ಮ ಥಲೆಯ ಬಳಿಗೆ ಬರಲೇ ಎದರುತ್ತಿರುವ ಗ್ನಾನವನ್ನು ಸಂಪಾದಿಸಿ ನಿಮಗೆಲ್ಲಾ ಅಂಚಬೇಕೆಂದು ನಮ್ಮ ಪೂಜ್ಯ ಗುರುಗಳಾದ ಸ್ರೀ ಸ್ರೀ ಸ್ರೀ ಗಾಂಪರೊಡಯರ ಹಾಗ್ನೆ ಅಗಿರೋಣದಿಂದ ನಾವು ಅಮೇರಿಕಾ ಮುಂತಾದ ಹಲವಾರು ಚಪ್ಪನ್ನಾರು ದೇಸವನ್ನು ಸುತ್ತಿ ಬಂದು ನಿಮಗೆ ಸ್ವಲ್ಪ ಸ್ವಲ್ಪವಾಗಿ ಅಂಚುತ್ತೇವೆ. ಅಂಚೇ ಅಂಚುತ್ತೇವೆ. ಅದಕ್ಕೆ ಮೊದಲು ನಿಮಗೊಂದು ಸಣ್ಣ ಪ್ರಸ್ನೆ. ಅದು ನಾವು ನಿಮ್ಮನ್ನು ಕೇಳಲಿಚ್ಚಿಸುವ ವಿಸೇಸ ಪ್ರಸ್ನೆ ಅಲ್ಲ. ಅದು ಯಕ್ಕಚ್ಚಿತ್ತು ಒಬ್ಬ ಜುಜುಬಿ, ಕೇವಲ ಯಿಮಾನ ಬುಡುವವ ನಿಮ್ಮ ಪುದ್ದಾರಕ್ಕಾಗಿ ನಮಗೆ ಆಕಿದ ಪ್ರಸ್ನೆ. ಅಮೇರಿಕಾದಲ್ಲಿ ಆಕಿದ ಪ್ರಸ್ನೆ.

ಗುರುಗಳು ಹೇಳುತ್ತಾ ಹೋದಂತೆ ಶಿಷ್ಯಂದಿರು ಭಯಬಕ್ತಿಗಳಿಂದ ಕೇಳುತ್ತಾ ಮಠದ ಸಂಪ್ರದಾಯಕ್ಕೆ ತಕ್ಕಂತೆ (ಕೆಲವರು ಸಶಬ್ದವಾಗಿ) ಆಕಳಿಸತೊಡಗಿದರು.

ಗುರುಗಳಿಗೆ ಇನ್ನೂ ಸ್ಫೂರ್ತಿ ಉಕ್ಕಿಬಂತು. ಭಾಷಣವನ್ನು ಶುರುಮಾಡಿದರು. ನಾನೇ ಜ್ಞಾಪಿಸಿದೆ ಅವರಿಗೆ "ಗುರುಗಳೇ ಪ್ರಶ್ನೆ".

ಗುರುಗಳು ಪ್ರಶ್ನೆ ಕೇಳುವಾಗ ನಷ್ಟು ಬವಣೆ ತೋರಿಸಿದ ಹಾವಭಾವ. ನಡೆಸಿದೆ ವ್ಯಾಕರಣದ ಕೊಲೆಯ ಬಗ್ಗೆ ಒಂದು ವಿಶೇಷಾಂಕವನ್ನು ಹೊರತರಲಿದ್ದೇವೆ. ತಪ್ಪದೆ ಓದಿ. ಅವರು ಕೇಳಿದ ಪ್ರಶ್ನೆಯ ಸಾರಾಂಶ ಈ ರೀತಿ ಇದೆ. "ನಾವು ಒಂದ ಯಿಮಾನ ಬುಡುವವನ ಮನೆಯಲ್ಲಿ ನಾಕುಜನ ಅವರೆ. ಆದರಾಗೆ ಒಬ್ಬಾಕಿ ಆತನ ಎಂಡತಿ, ಎಲ್ಡು ಅವನ ಐಕಳು. ಅಂಗಾರೆ ನಾಕನೆಯುವರು ಯಾರು ? ಏಳಿ. ಆ ನಾಕನೆಯುವರು ಯಾರು ?......ಹಾಗೆಯೇ ಮುಂದುವರೆಸಿದರು "ಉತ್ತರ ಗೊತ್ತಿಲ್ಲಂತ ಏಳಿ ನಾವು ಹುತ್ತರ ಏಳ್ತೀವಿ".

ಹೊಟ್ಟೆಗೆ ಕವಳಬಿದ್ದು ಸುಮಾರು ಮೂರು ಮೂರವರೆ ತಾಸಾದ್ದರಿಂದ ಗಾಂಪರಿಗೆ ಕ್ಷುದ್ಬಾಧೆ ಜೊತೆಗೆ ಆಹಾರ ದಾಹ ಹೆಚ್ಚಾದ್ದರಿಂದ ಈ ಸಭೆಯು ಆದಷ್ಟು ಬೇಗ ಬರಕಸ್ತಾದರೆ ಸಾಕು ಎಂಬ ಆತುರ ಇದ್ದುದರಿಂದ ಎಲ್ಲರೂ ಸಾಮೂಹಿಕವಾಗಿ "ಗೊತ್ತಿಲ್ಲ ಏಳಿ" ಏಳ್ರಿ "ಏಳ್ರಿ......."ಏಳೇ ಏಳ್ರಿ" ಎಂದು ಕಾಡತೊಡಗಿದರು,

ಗುರುಗಳು ಸಭೆಯನ್ನು ಒಂದು ಬಾರಿ ಅವಲೋಕಿಸಿದರು. ವಿಮಾನ ಚಾಲಕ ಹೇಳಿದ ಉತ್ತರ ಫ್ಲಾಷ್‌ಬ್ಯಾಂಕಿನಂತೆ ಕಣ್ಣು ಮುಂದೆ ಬಂದಿತು. ಗುರುಗಳಿಗೆ ಗೊತ್ತಾಗಲಿಲ್ಲವೇ ಸರಳ ಪ್ರಶ್ನೆಗೆ ಸರಳ ಉತ್ತರ, ಆ ನಾಲ್ಕನೆಯುವನು ನಾನು, ನಾನಲ್ಲದೇ ಬೇರೆ ಯಾರಾಗಲು ಸಾಧ್ಯ, ಗುರುಗಳೇ" ಗುರುಗಳ ಮುಖದಲ್ಲಿ ಮುಗುಳ್ನಗೆ ಮೂಡಿಬಂತು. ಗಂಟಲು ಸರಿಮಾಡಿಕೊಂಡರು. ಯಾರಿಗೂ ತಿಳಿಯದ ಉತ್ತರ ತಮಗೆ ತಿಳಿದಿದೆಯೆಂಬ ಹೆಮ್ಮೆ ಉಂಟಾಗಿ ನೆಟ್ಟಗೆ ಕುಳಿತರು. ಕುತೂಹಲಭರಿತರಾದ ಶಿಷ್ಯ-ಕೋಟಿ ಮೂರ್ಖರಾಗಿ ಕುಳಿತಿದ್ದರು. ಎಲ್ಲೆಲ್ಲೂ ನಿಶ್ಯಬ್ಧ. ಮೈ–ಕೈ ಪರಚಿಕೊಳ್ಳಬೇಕೆನ್ನುವಷ್ಟು ನಿಷ್ಯಬ್ಧ.


ಕಡೆಗೂ ನಿಶ್ಯಬ್ಧವನ್ನು ಭೇದಿಸಿಕೊಂಡು ಬಂದಿದ್ದು ಗುರುವಾಣಿ. ಉತ್ತರವನ್ನು ಕೇಳಿದೊಡನೆಯೇ ಶಿಷ್ಯಕೋಟಿ ಉಷ್ ಉಷ್ ಉಷ್ ಎಂದು ಹಾಡತೊಡಗಿ-ದವು. "ಗುರುಗಳಿಗೆ ಜಯವಾಗಲಿ" ಮೂರ್ಖ ಗುರುಗಳು ಚಿರಾಯುವಾಗಲಿ ಗಾಂಪತನವು ಅಮರವಾಗಲಿ ಎಂಬ ಕೂಗು. ಆರ್ತನಾದ.

ಗುರುಗಳಿಂದ ಬಂದ ಆ ಉತ್ತರ ತಿಳಿಯಲು ನಿಮಗೂ ಕುತೂಹಲ ಉಂಟಾಗಿರಬಹುದು. ಅವರ ಕಂಚಿನಂತಹ ಕಂಠದಿಂದ ಹೊರಬಿದ್ದ ಅಮರವಾಣಿ–ಅಮೂಲ್ಯವಾದುದು, ಮರೆಯಲಾಗದಂತದು ಅವು "ನಾಕನೆಯುವರು ನಾವು," "ನಾವಲ್ಲದೇ ಬೇರೆ ಯಾರು ಆಗಲು ಸಾಧ್ಯ".

ವಿ.ಸೂ.:– ಅಪ್ಪಿತಪ್ಪಿ ಈ ಲೇಖನವನ್ನು ಓದಿದವರು ಯಾರೂ ದಯಮಾಡಿ ಈ ವಿಷಯವನ್ನು ಶ್ರೀಯುತ ದಾಶರಥಿ ದೀಕ್ಷಿತರಿಗೆ ತಿಳಿಸಬಾರದಾಗಿ ವಿನಂತಿ.

—ಸಂ. ಗಾಂ.ಪಾ
ಗಾಂ.ಮ

Champs of the printing track – HMT's range of super performers.



SOM 131


Single Colour Sheetfed Offset Printing Machine


Max sheet size	mm	560 x 790
Min sheet size	mm	300 x 420
Speed range	i p h	2500-7500
Power	kW	7 52

SOM 125

Single Colour Sheetfed Offset Printing Machine

Max sheet size	mm	460 x 460
Min sheet size	mm	210 x 250
Speed range	i p h	2500-7500
Power	kW	3 45





INVICTA 36R


Single Colour Sheetfed Offset Printing Machine

Max. sheet size	mm	655 x 925
Min sheet size	mm	300 x 420
Speed range	i p h	2500-7500
Power	kW	7 52

SOM 236

Two Colour Sheetfed Offset Printing Machine

Max sheet size	mm	655 x 925
Min sheet size	mm	300 x 420
Speed range	i p h	2500-7500
Power	kW	14 22



For details contact: hmt

HMT Limited
Machine Tool Marketing Division
10/A, Kasturba Road
Bangalore-560 001.

REGISTERED No. BGW - 180

Printed by V R NATH for the Publisher M SHIVAKUMAR, Published and owned by M SHIVA KUMAR, 36, 6th Main Road, Malleswaram, Bangalore - 560 003 Printed at IMPRESSIONS, 404, Sampige Road, Malleswaram, Bangalore - 560 003 Editor M SHIVA KUMAR